# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 77 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.09.2024 • ಬುಧವಾರ • ಪುಟ:04 • ಬೆಲೆ:2

Volume:02 • Issue: 77 • PRGI No:KARKAN/2023/88055 • VIJAYANAGARA • 18.09.2024 • Wednesday • Page:04 • Rs:2


ಮೈಕ್ರೋ ನ್ಯೂಸ್

## ಚಿರತೆ ಹಾವಳಿ ತಡೆಗೆ ಆಗ್ರಹ



**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಜಂಬುನಾಥಹಳ್ಳಿ, ರಾಜಾಪುರ ಹಾಗೂ ನಗರದ ಹೊರವಲಯದ ರಾಯರ ಕೆರೆ ಭಾಗದಲ್ಲಿ ಚಿರತೆಗಳ ಹಾವಳಿಗೆ ಜಾನುವಾರುಗಳು ತುತ್ತಾಗುತ್ತಿದ್ದು, ರೈತರು ಕೃಷಿ ಚಟುವಟಿಕೆಗಳಿಗೆ ತೆರಳದಂತಾಗಿದೆ. ಕೂಡಲೇ ಅರಣ್ಯ ಇಲಾಖೆಯವರು ಚಿರತೆ ಸೆರೆಹಿಡಿದು ಮೃಗಾಲಯಕ್ಕೆ ನೀಡಬೇಕು ಎಂದು ಈ ಭಾಗದ ರೈತರು ಹಾಗೂ ಎಐಕೆಎಸ್ ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘವು ಆಗ್ರಹಿಸಿ ಅರಣ್ಯಾಧಿಕಾರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ರೈತ ವೆಂಕೋಬನಾಯಕ ಮಾತನಾಡಿ, ಕೃಷಿಕರ ಸಾಕುಪ್ರಾಣಿಗಳ ಮೇಲೆ ಚಿರತೆಗಳು ದಾಳಿ ಮಾಡುತ್ತಿವೆ. ಬಿತ್ತನೆ ಮಾಡಿದ ರೈತರು ಹೊಲಗಳಿಗೆ, ನೀರು ಹಾಯಿಸುವುದು ಸೇರಿದಂತೆ ಕೃಷಿ ಚಟುವಟಿಕೆಗಳಿಗೂ ತೆರಳದಂತಾಗಿದೆ. ಕೂಡಲೇ ಚಿರತೆಯನ್ನು ಹಿಡಿದು ಮೃಗಾಲಯಕ್ಕೆ ಕಳುಹಿಸಬೇಕು ಇಲ್ಲದಿದ್ದರೆ ರೈತರಿಗೆ ಎಕರೆಗೆ 50,000, ಐವತ್ತು ಸಾವಿರ ನಷ್ಟ ಪರಿಹಾರ ನೀಡಬೇಕು. ಅನಾಹುತಗಳಿಗೆ ಅರಣ್ಯ ಇಲಾಖೆ ಹೊಣೆಯಾಗಬೇಕಾಗುತ್ತದೆ ಎಂದರು.

ಸಂಘಟನೆಯ ಯಲ್ಲಾಲಿಂಗ ಮಾತನಾಡಿ, ಹೊಲಗಳಲ್ಲಿರುವ ರೈತ ಕುಟುಂಬಗಳು ಭಯದಿಂದ ಬದುಕುತ್ತಿದ್ದು, ಕೂಡಲೇ ಚಿರತೆಗಳನ್ನು ಹಿಡಿದು ಮೃಗಾಲಯಕ್ಕೆ ಕಳುಹಿಸಬೇಕು ಎಂದು ಒತ್ತಾಯಿಸಿದರು.ಮುಖಂಡರಾದ ದುರುಗಪ್ಪ ಪೂಜಾರಿ, ಕೆ.ಕೆರೆಹನುಮಂತ, ಜಂಬಯ್ಯ, ಕನಕಪ್ಪ ಇತರರಿದ್ದರು.

# ವಿಜಯನಗರ ಅಭಿವೃದ್ಧಿಗೆ ಎಲ್ಲರೂ ಶ್ರಮಿಸೋಣ

**ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ | ಜಿಲ್ಲಾಧಿಕಾರಿಗಳಿಂದ ರಾಷ್ಟ್ರ ಧ್ವಜಾರೋಹಣ | ಉದ್ಯೋಗ, ಶಿಕ್ಷಣದ ವಿಶೇಷ ಮೀಸಲಾತಿ ಪ್ರಯೋಜನ ಪಡೆಯಿರಿ ಎಂ.ಎಸ್.ದಿವಾಕರ ಹೇಳಿಕೆ | ಹೊಸಪೇಟೆ 250 ಹಾಸಿಗೆ ಆಸ್ಪತ್ರೆ 400 ಹಾಸಿಗೆ ಮೇಲ್ದರ್ಜೆಗೆ ಗ್ರೀನ್ ಸಿಗ್ನಲ್ | 15 ಕೋಟಿ ರೂ. ಮಂಜೂರಾತಿ ದೊರತಿದೆ**







**ಹಂಪಿ ಟೈಮ್ಸ್ ಹೊಸಪೇಟೆ**

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ವಿಜಯನಗರ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಎಲ್ಲರೂ ಶ್ರಮಿಸೋಣ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹೊಸಪೇಟೆ ನಗರಸಭೆ ಸಹಯೋಗದಲ್ಲಿ ಮಂಗಳವಾರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯಲ್ಲಿ 405 ಅಡಿ ಎತ್ತರದ ಧ್ವಜ ಸ್ತಂಭದ ಧ್ವಜಾರೋಹಣ, ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಪಥಸಂಚಲನ ವೀಕ್ಷಿಸಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

ಕಲ್ಯಾಣ–ಕರ್ನಾಟಕ ನಿಜಾಮರ ಆಳ್ವಿಕೆಯಿಂದ ಸ್ವಾತಂತ್ರ್ಯಗೊಂಡು 77 ವರ್ಷಗಳಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ವಿಶೇಷ ಸ್ಥಾನಮಾನ ಕಲ್ಪಿಸುವ ಹಿತ ದೃಷ್ಟಿಯಿಂದ ಸಂವಿಧಾನ ತಿದ್ದುಪಡಿ ಕಾಯ್ದೆ 371 (ಜೆ) ಜಾರಿಗೆ ತರಲಾಗಿದೆ. ಈ ಭಾಗದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಲು ಸಾಧ್ಯವಾಗಿದ್ದು, ಕಲ್ಯಾಣ ಕರ್ನಾಟಕ ಭಾಗದ ವ್ಯಾಪ್ತಿಗೆ ಒಳಪಡುವ 07 ಜಿಲ್ಲೆಗಳಲ್ಲಿ ಶಿಕ್ಷಣ ಹಾಗೂ ಉದ್ಯೋಗ ಮೀಸಲಾತಿಗಾಗಿ ಶೇ. 80 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ ಹಾಗೂ ಇತರೆ ಜಿಲ್ಲೆಗಳಲ್ಲಿ ಈ ಭಾಗದ ಜನರಿಗಾಗಿ ಶೇ. 8 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅದರಂತೆ ಅಂದಿನ ಸರ್ಕಾರ ದಿನಾಂಕ 06/11/2013 ರಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಕಲಬುರಗಿಯಲ್ಲಿ ಸ್ಥಾಪಿಸಿದ್ದು, ಇದು ಈ ಭಾಗದ 40 ವಿಧಾನಸಭಾ ಕ್ಷೇತ್ರಗಳ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಿಗೂ ಸೇರಿದಂತೆ, ಎಲ್ಲಾ ಭಾಗಗಳ ಮೂಲಭೂತ ಸೌಕರ್ಯ, ಆರೋಗ್ಯ, ಸಾಮಾಜಿಕ, ರಸ್ತೆ ಸಂಪರ್ಕ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಅನುದಾನವನ್ನು ಮೀಸಲಿರಿಸಲಾಗಿದೆ. ಈದರನ್ವಯ 2024–25 ನೇ ಸಾಲಿನ ಮ್ಯಾಕ್ರೋ ಯೋಜನೆಯಡಿಯಲ್ಲಿ ಹೊಸಪೇಟೆ ಪಟ್ಟಣದ 250 ಹಾಸಿಗೆ ಆಸ್ಪತ್ರೆಯನ್ನು 400 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆರಿಸುವ ರೂ.15 ಕೋಟಿಗಳ ಬೃಹತ್ ಕಾಮಗಾರಿಗೆ ಮಂಡಳಿಯಿಂದ ಮಂಜೂರಾತಿ ದೊರಕಿದೆ ಎಂದು ಹೇಳಿದರು.

ಭಾರತ 1947ರ ಆಗಸ್ಟ್ 15 ರಂದು ಸ್ವಾತಂತ್ರ್ಯ ಗಳಿಸಿಕೊಂಡಿದೆ. ಆದರೆ ಹೈದ್ರಾಬಾದ್ ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದ ವಿಜಯನಗರ, ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಹಾಗೂ ಬಳ್ಳಾರಿ ಪ್ರದೇಶಗಳು ಸ್ವಾತಂತ್ರವಾಗಲು ಒಂದು ವರ್ಷ ಕಾಲ ಕಾಯಬೇಕಾಯಿತು ಎಂದರು.

ರಾಷ್ಟ್ರಕ್ಕೆ 1947 ರ ಆಗಸ್ಟ್ 15ರಂದು ಸ್ವಾತಂತ್ರ್ಯ ದೊರೆತರೂ ಹೈದ್ರಬಾದ್ ಸಂಸ್ಥಾನದ ಪ್ರಜೆಗಳಿಗೆ ಸ್ವಾತಂತ್ರ್ಯ ದೊರೆತಿರಲಿಲ್ಲ. ಸ್ವತಂತ್ರ ರಾಷ್ಟ್ರಕಟ್ಟುವ ಬಯಕೆಯಿಂದ ಹೈದ್ರಾಬಾದ್ ನಿಜಾಮರು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಸೇರಿಕೊಳ್ಳದೇ ಸ್ವತಂತ್ರವಾಗಿರಲು ಬಯಸಿ ಹೈದ್ರಾಬಾದ್ ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದರು. ಹೈದ್ರಾಬಾದ್ ನಿಜಾಮನು ಖಾಸಿಂ ರಜನಿ ಎಂಬುವವನ ನೇತೃತ್ವದಲ್ಲಿ ರಜಾಕಾರ ದಾಳಿಯನ್ನು ಆರಂಭಿಸಿದರು. ನಿರಂತರವಾಗಿ ಶೋಷಣೆ ಮಾಡುತ್ತಿದ್ದರು, ಇದರ ಪರಿಣಾಮವಾಗಿ ಈ ಭಾಗದ ಜನರು ಅಭಿವ್ಯಕ್ತಿ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು ಜನರ ಪಾಲಿಗೆ ಇರಲೇ ಇಲ್ಲ. ಈ ಪ್ರದೇಶವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳ ಪ್ರಗತಿ ಶೂನ್ಯದ ಕಡೆಗೆ ಹೆಜ್ಜೆ ಇಡುವಂತಾಯಿತು, ಸ್ವಾಮಿ ರಾಮಾನಂದ ತೀರ್ಥರು, ಡಾ.ಮೇಲುಕೋಟೆಯವರು ಕಲಬುರಗಿಯ ಅನಿರುದ್ಧ ದೇಸಾಯಿ, ಯಾದಗಿರಿಯ ಕೋಲೂರು ಮಲ್ಲಪ್ಪ ಹಾಗೂ ಚಿತಾಪುರದ ಬಸಪ್ಪ ಸಜ್ಜನ್ ಶೆಟ್ಟರ್, ಕಾರಟಗಿಯ ಬೆಣಕಲ್ ಭೀಮಸೇನರಾಯ್, ಆಳಂದದ ಎ.ಬಿ.ಪಾಟೀಲ್, ಕನಕಗಿರಿಯ ಜಯತೀರ್ಥ, ರಾಜ ಪುರೋಹಿತ್ ಮುಂತಾದವರ ನೇತೃತ್ವದಲ್ಲಿ ಕಲ್ಯಾಣ ಕರ್ನಾಟಕದ ವಿಮೋಚನೆಗೆ ಹೋರಾಟಗಳು ಪ್ರಾರಂಭಗೊಂಡವು ಎಂದು ತಿಳಿಸಿದರು.

ಸ್ವಾಮಿ ರಮಾನಂದ ತೀರ್ಥರು ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ "ಕ್ವಿಟ್ ಕಾಲೇಜು ಆ್ಯಕ್ಟನವ್" ಕರೆಗೆ ಸಾವಿರಾರು ಕಾಲೇಜು ಹಾಗೂ ಶಾಲಾ ವಿಧ್ಯಾರ್ಥಿಗಳು ಚಳುವಳಿಯಲ್ಲಿ ಭಾಗವಹಿಸಿ ಹೋರಾಟಕ್ಕೆ ಬಲ ತುಂಬಿದರು, ಇಷ್ಟೇ ಅಲ್ಲದೇ ಗ್ರಾಮೀಣ ಪ್ರದೇಶದಲ್ಲಿ ಅನ್ನದಾನಯ್ಯ ಪುರಾಣಿಕ, ಪ್ರಭುರಾಜ ಪಾಟೀಲ್, ಶಿವಮೂರ್ತಿಸ್ವಾಮಿ ಅಳವಂಡಿ, ಸೇರಿದಂತೆ ಅನೇಕರು ಹೈದ್ರಾಬಾದ್ ಕರ್ನಾಟಕ ಭಾಗದ ವಿಮೋಚನೆಗೆ ತಮ್ಮ ಪ್ರಾಣವನ್ನೇ ಲೆಕ್ಕಿಸದೇ ಹೋರಾಡಿದರು. ಅಲ್ಲದೇ ಅಕ್ಕಮಹಾದೇವಿ, >>2




## ಬೆಳಕಿನ ಹಾದಿ

# ದೇವರು ಕಾಣೆಯಾಗಿದ್ದಾನೆ?

■ ಆರ್.ಬಿ.ಗುರುಬಸವರಾಜ



ಬೊಮ್ಮಳ್ಳಿಯಲ್ಲಿ ಅಜಿತ ಮತ್ತು ಅಚಿಂತ್ಯ ಇಬ್ಬರು ಸಹೋದರರಿದ್ದರು. ಇಬ್ಬರೂ ವಿಪರೀತ ಚೇಷ್ಟೆಯುಳ್ಳವರಾಗಿದ್ದರು. ದಿನವೂ ಏನಾದರೊಂದು ತರ್ಲೆ ಕೆಲಸ ಮಾಡಿ ಅಪ್ಪ ಅಮ್ಮನಿಂದ ಬೈಸಿಕೊಳ್ಳುತ್ತಿದ್ದರು. ಇವರ ತರ್ಲೆ ಕೆಲಸದಿಂದ ಇಡೀ ನಗರವೇ ರೋಸಿ ಹೋಗಿತ್ತು. ನಗರದಲ್ಲಿ ಯಾವುದೇ ಕಿಡಿಗೇಡಿತನ ಸಂಭವಿಸಿದರೂ ಅದನ್ನು ಇವರಿಬ್ಬರೇ ಮಾಡಿದ್ದು ಎನ್ನುವಂತಾಗಿತ್ತು. ಇದರಿಂದ ಪೋಷಕರು ರೋಸಿ ಹೋಗಿದ್ದರು.

ಅದೇ ವೇಳೆ ನಗರದಲ್ಲಿ ಹೊಸದಾಗಿ ಒಂದು ಕೋಚಿಂಗ್ ಸೆಂಟರ್ ಪ್ರಾರಂಭವಾಗಿತ್ತು. ಅವರು ಮಕ್ಕಳಿಗೆ ತುಂಬಾ ಶಿಸ್ತುಬದ್ಧವಾಗಿ ಕಲಿಸುತ್ತಾರೆ ಎಂಬ ಸುದ್ದಿ ಹರಡಿತ್ತು. ಇದನ್ನು ತಿಳಿದ ತಾಯಿ ಅಲ್ಲಿನ ಶಿಕ್ಷಕರನ್ನು ಭೇಟಿಯಾದಳು. ತಮ್ಮ ಹುಡುಗರ ತರ್ಲೆ ಕೆಲಸಗಳನ್ನು ತಿಳಿಸಿ, ಅವರಿಗೆ ಸರಿಯಾಗಿ ಬುದ್ಧಿ ಕಳಿಸುವಂತೆ ವಿನಂತಿಸಿಕೊಂಡಳು. ಅಲ್ಲಿನ ಶಿಕ್ಷಕರು ಒಂದು ಷರತ್ತಿನ ಮೇಲೆ ಕಲಿಸಲು ಒಪ್ಪಿದರು. ಇಬ್ಬರನ್ನೂ ಜೊತೆಗೆ ಕಳಿಸಿದೆ ಬೇರೆ ಬೇರೆ ಸಮಯದಲ್ಲಿ ಕಳಿಸಲು ಹೇಳಿದರು.

ಅದರಂತೆ ತಾಯಿ ಬೆಳಿಗ್ಗೆ ಒಬ್ಬರನ್ನು ಮತ್ತು ಸಂಜೆ ಇನ್ನೊಬ್ಬರನ್ನು ಕಳಿಸಲು ಒಪ್ಪಿದಳು. ಅದರಂತೆ ಬೆಳಿಗ್ಗೆ ಚಿಕ್ಕವ ಅಚಿಂತ್ಯನನ್ನು ಕಳಿಸಿದರು. ಅವನನ್ನು ಎದುರಿಗೆ ಕೂರಿಸಿಕೊಂಡ ಶಿಕ್ಷಕರು ದೊಡ್ಡ ಧ್ವನಿಯಲ್ಲಿ 'ದೇವರು ಎಲ್ಲಿದ್ದಾನೆಂದು ನಿನಗೇನಾದರೂ ತಿಳಿದಿದೆಯೇ?' ಎಂದು ಪ್ರಶ್ನೆ ಕೇಳಿದರು.

ಇದನ್ನು ನಿರೀಕ್ಷಿಸಿರದ ಅಚಿಂತ್ಯ ಉತ್ತರಿಸಲಾಗದೇ ಸುಮ್ಮನೆ ಕುಳಿತುಕೊಂಡ. ಶಿಕ್ಷಕರು ಅದೇ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದರು. ಅವರ ಗೊಗ್ಗರು ಧ್ವನಿಯು ಕಿವಿಯಲ್ಲಿ ಕಾದ ಸೀಸವನ್ನು ಸುರಿದಂತಾಯ್ತು. ಅಚಿಂತ್ಯನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಶಿಕ್ಷಕರು ಇನ್ನಷ್ಟು ಏರು ಧ್ವನಿಯಲ್ಲಿ ಅದೇ ಪ್ರಶ್ನೆಯನ್ನು ಪುನರಾವರ್ತಿಸಿದರು. ಅವನು ಬಿಟ್ಟ ಕಣ್ಣು ಬಿಟ್ಟಂತೆ ಬಾಯಿ ತೆರೆದು ಕುಳಿತುಕೊಂಡ.

ಈಗ ಶಿಕ್ಷಕರು ತಮ್ಮ ಕುರ್ಚಿಯನ್ನು ಅವನ ಮುಂದೆ ಎಳೆದುಕೊಂಡು ಕೂರುತ್ತಾ 'ದೇವರು ಎಲ್ಲಿದ್ದಾನೆ? ಹೇಳು!' ಎಂದು ಕೇಳುತ್ತಾ ಅವನ ಮುಖದ ಸಮೀಪ ಬೆರಳನ್ನು ಅಲ್ಲಾಡಿಸಿದರು. ಇನ್ನು ತನಗೆ ಉಳಿಗಾಲವಿಲ್ಲ ಎಂಬುದನ್ನು ಅರಿತ ಅಚಿಂತ್ಯ ಜೋರಾಗಿ ಕಿರುಚುತ್ತಾ, ಅಲ್ಲಿಂದ ಮನೆಗೆ ಓಡಿಹೋದ.

ಮನೆಗೆ ಓಡಿ ಬಂದವನೇ ಅವನ ಅಣ್ಣ ಅಜಿತನನ್ನು ಹುಡುಕಾಡಿದ. ಆಗ ಅಜಿತನು ಬಚ್ಚಲಲ್ಲಿ ಸ್ನಾನ ಮಾಡುತ್ತಿದ್ದನು. ಕೂಡಲೇ ಅಚಿಂತ್ಯ ಬಚ್ಚಲಮನೆಗೆ ನುಗ್ಗಿದ. 'ಯಾಕೋ! ಏನಾಯ್ತು?' ಎಂದ ಅಜಿತ. ಅಚಿಂತ್ಯ ಏದುಸಿರು ಬಿಡುತ್ತಾ "ನಾವು ಈ ಬಾರಿ ದೊಡ್ಡ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದೇವೆ! ದೇವರು ಕಾಣೆಯಾಗಿದ್ದಾನಂತೆ ಮತ್ತು ನಾವೇ ಅದನ್ನು ಮಾಡಿದ್ದೇವೆ ಎಂದು ಎಲ್ಲರೂ ಭಾವಿಸಿದ್ದಾರೆ" ಎಂದನು. ಇದನ್ನು ಕೇಳಿದ ಅಜಿತ ಸುಸ್ತೋ ಸುಸ್ತು.

ಮರುದಿನದಿಂದ ಇಬ್ಬರೂ ಸುಳ್ಳು ಹೇಳುವುದು ಹಾಗೂ ತರ್ಲೆ ಕೆಲಸ ಮಾಡುವುದನ್ನು ನಿಲ್ಲಿಸಿದರು. ಇದರಿಂದ ತಂದೆ ತಾಯಿಗಳು ನಿಶ್ಚಿಂತವಾಗಿ ಜೀವನ ನಡೆಸುವಂತಾಯಿತು. ಕೋಚಿಂಗ್ ಸೆಂಟರಿನ ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದರು.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

**ದೇಶದ ಪ್ರತಿಯೊಂದು ಗ್ರಾಮಗಳಲ್ಲಿ, ಪುಟ್ಟ ಊರುಗಳಲ್ಲಿ ಶಹರಗಳಲ್ಲಿ ಇಂತಹ ಲಕ್ಷಾಂತರ ಮಹಿಳೆಯರು ಗಂಡಂದಿರ ಬೇಜವಾಬ್ದಾರಿತನ, ಕುಡಿತ, ದುಶ್ಚಟಗಳ ದಾಸ್ಯ, ಅನುಮಾನ ಶಂಕೆಗಳನ್ನು ಸಹಿಸಿ ಬದುಕು ಸಾಗಿಸುತ್ತಿದ್ದಾರೆ. ಮನೆ ಗಂಡ ಮಕ್ಕಳು ಎಂಬ ಎಲ್ಲ ಜವಾಬ್ದಾರಿಗಳನ್ನು ಹೊತ್ತಿರುವ ಈ ಹೆಣ್ಣು ಮಕ್ಕಳಿಗೆ ಈ ಎಲ್ಲ ಕೆಲಸಗಳಿಗೆ ಪ್ರತಿಯಾಗಿ ಸಿಗುವುದು ನೋವು, ಅವಮಾನ ಮತ್ತು ಕುಡಿದು ಬಂದ ಗಂಡನಿಂದ ಭರಿಸಲಾಗದ ಹಿಂಸೆ ಮತ್ತು ಹೊಡೆತಗಳು....**

# ನಿನಗೆ ಸ್ತ್ರೀ ಎಂದರೆ ಅಷ್ಟೇ ಸಾಕೆ?



ತ್ರಾಸು ಕಂಪಿಸುವ ದೇಹ, ಕೆದರಿದ ತಲೆ ಕೂದಲು, ನೋವು ಮತ್ತು ಜ್ವರದ ಭಾದೆಯಿಂದ ಬಳಲುತ್ತಿರುವ ಆ ಹೆಣ್ಣು ಮಗಳು ಮಧ್ಯಾಹ್ನ 2 ಗಂಟೆಯ ಸುಮಾರಿಗೆ ತನ್ನ ತಾಯಿಯೊಂದಿಗೆ ನಮ್ಮ ಮನೆಯ ಬಾಗಿಲಿಗೆ ಬಂದಳು. ಚಹಾ ಮಾಡಿಕೊಟ್ಟು ಆಕೆ ಕುಡಿಯುವವರೆಗೆ ಸುಮ್ಮನಿದ್ದ ನಾನು ಆಮೇಲೆ ಏನಾಯ್ತು? ಎಂದು ಕೇಳಿದಾಗ ಆಕೆ ತನ್ನ ಪ್ರವರ ಬಿಚ್ಚಿಟ್ಟಿದ್ದು ಹೀಗೆ.

ಪುಟ್ಟ ಊರಿನಲ್ಲಿ ವಾಸವಾಗಿರುವ ಆಕೆ ಆತನನ್ನು ಪ್ರೀತಿಸಿ ಅಂತರ್ಜಾತಿಯ ವಿವಾಹವಾಗಿದ್ದು 14 ವರ್ಷಗಳು ಕಳೆದಿವೆ. ಹೈಸ್ಕೂಲಿನಲ್ಲಿ ಓದುತ್ತಿರುವ ಓರ್ವ ಹೆಣ್ಣು ಮಗಳು ಮತ್ತು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಓರ್ವ ಮಗ ಅವರಿಗೆ ಇದ್ದಾನೆ. ಇತ್ತೀಚಿಗೆ ಮನೆಯನ್ನು ಕಟ್ಟಿಕೊಂಡಿರುವ, ಮನೆಯಲ್ಲಿಯೇ ಪುಟ್ಟ ಕಿರಾಣಿ ಅಂಗಡಿಯನ್ನು ನಡೆಸುತ್ತಿರುವ ಇದರ ಜೊತೆ ಗ್ರಾಮಾಭಿವೃದ್ಧಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆ ಹೆಣ್ಣು ಮಗಳನ್ನು ನೋಡಿದರೆ ಮೇಲ್ನೋಟಕ್ಕೆ ಎಲ್ಲವೂ ಚೆನ್ನಾಗಿದೆ ಎಂದು ಕಾಣುವ ಸಂಸಾರ ಅವರದು.

ಪುಟ್ಟದೊಂದು ಸಂಸ್ಥೆಯಲ್ಲಿ ಎರಡುವರೆ ಸಾವಿರ ಸಂಬಳಕ್ಕೆ ದುಡಿಯುವ ಆಕೆಯ ಪತಿ ಕೆಲಸಕ್ಕೆ ಹಾಜರಾದದ್ದಕ್ಕಿಂತ ಗೈರಾದದ್ದೆ ಹೆಚ್ಚು. ಮನೆಯ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ನಿರ್ವಹಿಸುವ ಆಕೆ ತನ್ನ ಅಂತರ್ಜಾತಿಯ ವಿವಾಹದ ಕಾರಣದಿಂದಾಗಿ ತನ್ನ ಪತಿಯ ಬೇಜವಾಬ್ದಾರಿತನವನ್ನು ಮುಚ್ಚಿಟ್ಟು ನಾಲ್ಕು ಜನರಂತೆ ಬದುಕಬೇಕೆಂಬ ಅದಮ್ಯ ಆಶಯವನ್ನು ಹೊಂದಿದ್ದಾಳೆ.

ಪದೇ ಪದೇ ಸಾಲ ಮಾಡಿ, ಇಲ್ಲವೇ ತಾನು ಕೆಲಸ ಮಾಡುವ ಸಂಸ್ಥೆಯಲ್ಲಿ ಹಣವನ್ನು ಲಪಟಾಯಿಸಿ ಉಡಾಯಿಸಿ ಮನೆಗೆ ಬರುವುದು ಆತನಿಗೆ ರೂಢಿಯಾಗಿದ್ದು ಇರುವ ಆ ಪುಟ್ಟ ನೌಕರಿಯು ಹೋಗಬಾರದೆಂದು ಈಕೆ ಒಂದೆರಡು ಬಾರಿ ಸಾವಿರಾರು ರೂಗಳನ್ನು ಮರಳಿ ಸಂಸ್ಥೆಗೆ ಕಟ್ಟಿ ತನ್ನ ಗಂಡನ ನೌಕರಿಯನ್ನು ಉಳಿಸಿಕೊಟ್ಟಿದ್ದಾಳೆ. ಇಷ್ಟಾದರೂ ಇಲ್ಲಿಯವರೆಗೆ ಆತ ಒಂದು ಪೈಸೆ ಹಣವನ್ನು ಮನೆಯ ಖರ್ಚಿಗೆ ತಂದು ಕೊಟ್ಟಿಲ್ಲ.

ಆತನ ವಯಸ್ಸಾದ ತಂದೆ ತಾಯಿ ಈತನ ಹುಚ್ಚಾಟಗಳಿಂದ ಬೇಸತ್ತು ತಮ್ಮದೇ ಆದ 2 ಎಕರೆ ಹೊಲದಲ್ಲಿಯೇ ಪುಟ್ಟದಾದ ಮನೆ ಮಾಡಿಕೊಂಡು ಜೀವಿಸುತ್ತಿದ್ದಾರೆ. ಓರ್ವ ತಮ್ಮನಿದ್ದು ಆತನು ಕೂಡ ಇವರಿಂದ ದೂರ ಇದ್ದಾನೆ.

ಗಂಡನ ಎಲ್ಲ ತಿರುಬೋಕಿ ಕೆಲಸಗಳನ್ನು ಸಹಿಸಿಕೊಂಡು ಬದುಕುತ್ತಿರುವ ಆ ಹೆಣ್ಣು ಮಗಳು ಗಂಡನಿಗೆ ತಕರಾರು ಮಾಡಿದಾಗಲೆಲ್ಲ ಆಕೆಯ ಫೋನಿನಿಂದ ಆಕೆ ಕೆಲಸ ಮಾಡುತ್ತಿರುವ ಸಂಸ್ಥೆಯ ಇತರ ಪುರುಷ ಸಹೋದ್ಯೋಗಿಗಳಿಗೆ ಆಕೆಯದೆ ಮೊಬೈಲ್ ಅನ್ನು ಬಳಸಿ ಸಂದೇಶಗಳನ್ನು ಕಳಿಸಿ ಅವುಗಳ ಸ್ಕ್ರೀನ್ ಶಾಟ್ ಗಳನ್ನು ತೆಗೆದು ತನ್ನ ಮೊಬೈಲ್ಗೆ ರವಾನಿಸಿ ಆಕೆಗೆ ಅವರೆಲ್ಲರೊಂದಿಗೆ ಅಶ್ಲೀಲ ಸಂಬಂಧವಿರುವುದಾಗಿ ಹೇಳುತ್ತೇನೆ ಎಂದು ಆಕೆಯನ್ನು ಬೆದರಿಸುತ್ತ ತನ್ನ ಕೆಲಸ ಸಾಧಿಸಿಕೊಳ್ಳುತ್ತಾನೆ. ಈಗಾಗಲೇ ತವರಿನವರ ಬೆಂಬಲವನ್ನು ಕಳೆದುಕೊಂಡಿರುವ ಆಕೆ ಸಮಾಜದಲ್ಲಿ ತನ್ನ ಮರ್ಯಾದೆ ತೆಗೆದಾನು ಎಂಬ ಭಯದಿಂದ ಸುಮ್ಮನಾಗಿಬಿಡುತ್ತಿದ್ದಳು

ಇತ್ತೀಚೆಗೆ ಗಂಡ ತನ್ನ ದುಶ್ಚಟಕ್ಕೆ ಸಾಲ ಎತ್ತಿದ್ದು ಗೊತ್ತಾಗಿ ಸ್ವಲ್ಪ ಕೂಗಾಡಿದಾಗ ಆತ ಆಕೆಯನ್ನು ಮನಬಂದಂತೆ ಥಳಿಸಿ, ತಲೆ ಕೂದಲು ಹಿಡಿದೆಳೆದು ನಡುರಸ್ತೆಯಲ್ಲಿ ನೆಲಕ್ಕೆ ಬೀಳಿಸಿ ಹಿಗ್ಗಾಮುಗ್ಗ ಹೊಡೆದಿದ್ದಾನಲ್ಲದೇ, ಬಿಡಿಸಲು ಬಂದ ವಸತಿ ಶಾಲೆಯಿಂದ ರಜಾ ದಿನಗಳನ್ನು ಕಳೆಯಲು ಮನೆಗೆ ಬಂದ ಮಗಳನ್ನು ಕೂಡ ಹಿಗ್ಗಾಮುಗ್ಗ ಹೊಡೆದು ಅಶ್ಲೀಲವಾಗಿ ಮಾತನಾಡಿ ನೋಯಿಸಿದ್ದಾನೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆತನ ಹೊಡೆತದಿಂದ ತನ್ನ ಬೆನ್ನಿನಲ್ಲಿ ಉಂಟಾದ ಗಾಯಗಳಿಗೆ ಚಿಕಿತ್ಸೆ ಪಡೆಯಲು ಆಕೆ ತಾಲೂಕಿನ ಸರ್ಕಾರಿ ಆಸ್ಪತ್ರೆಗೆ ಬಂದಾಗ ಆಸ್ಪತ್ರೆಯ ಸಿಬ್ಬಂದಿ ಪೊಲೀಸರಿಗೆ ದೂರನ್ನು ನೀಡದೆ ಚಿಕಿತ್ಸೆ ನೀಡಲಾಗದು ಎಂದು ಹೇಳಿ ಪೊಲೀಸರನ್ನು ಕರೆಸಿದ್ದಾರೆ. ಪೊಲೀಸರು ಆಕೆಯ ಹೇಳಿಕೆಯನ್ನು ಪಡೆದುಕೊಂಡ ಮೇಲೆ ವೈದ್ಯೋಪಚಾರ ಪಡೆದುಕೊಂಡ ಆಕೆ ಪೊಲೀಸರ ಸಲಹೆಯ ಮೇರೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಭೇಟಿಯಾಗಿದ್ದಳು.

ನಂತರ ನಮ್ಮ ಮನೆಗೆ ಬಂದ ಆಕೆ ಈ ಎಲ್ಲಾ ವಿಷಯಗಳನ್ನು ವಿಷದವಾಗಿ ಹೇಳಿದ ನಂತರ ಮತ್ತೊಮ್ಮೆ ಪೊಲೀಸ್ ಕಂಪ್ಲೇಂಟ್ ಕೊಡಲೇ, ಬೇಡವೇ ಎಂದು ಸಲಹೆ ಕೇಳಲು ನನ್ನ ಪತಿಯ ಬಳಿ ತನ್ನ ತಾಯಿಯೊಂದಿಗೆ ಬಂದಿದ್ದಳು.

ಇಷ್ಟೆಲ್ಲಾ ಆದರೂ ಪತಿಯನ್ನು ಬಿಡಲೊಪ್ಪದ ಆಕೆ ತನ್ನ ಪತಿಯನ್ನು ಕರೆಸಿ ಬುದ್ದಿ ಹೇಳಲು ಕೇಳಿಕೊಂಡಳು. ಬುದ್ಧಿ ಹೇಳಿದರೆ ಸರಿ ಹೋದಾನು ಎಂಬ ಆಶಯ ಮತ್ತು ನಾಲ್ಕು ಜನರ ನಡುವೆ ತಲೆ ಎತ್ತಿ ಬಾಳಲು ಗಂಡ ಜೊತೆಗೆ ಇರಬೇಕು ಎಂಬ ಅನಿವಾರ್ಯತೆಯ ಸಾಮಾಜಿಕ ವ್ಯವಸ್ಥೆಯ ಬಲಿಪಶು ಆಕೆ.

ದೇಶದ ಪ್ರತಿಯೊಂದು ಗ್ರಾಮಗಳಲ್ಲಿ, ಪುಟ್ಟ ಊರುಗಳಲ್ಲಿ ಶಹರಗಳಲ್ಲಿ ಇಂತಹ ಲಕ್ಷಾಂತರ ಮಹಿಳೆಯರು ಗಂಡಂದಿರ ಬೇಜವಾಬ್ದಾರಿತನ, ಕುಡಿತ, ದುಶ್ಚಟಗಳ ದಾಸ್ಯ, ಅನುಮಾನ ಶಂಕೆಗಳನ್ನು ಸಹಿಸಿ ಬದುಕು ಸಾಗಿಸುತ್ತಿದ್ದಾರೆ. ಮನೆ ಗಂಡ ಮಕ್ಕಳು ಎಂಬ ಎಲ್ಲ ಜವಾಬ್ದಾರಿಗಳನ್ನು ಹೊತ್ತಿರುವ ಈ ಹೆಣ್ಣು ಮಕ್ಕಳಿಗೆ ಈ ಎಲ್ಲ ಕೆಲಸಗಳಿಗೆ ಪ್ರತಿಯಾಗಿ ಸಿಗುವುದು ನೋವು, ಅವಮಾನ ಮತ್ತು ಕುಡಿದು ಬಂದ ಗಂಡನಿಂದ ಭರಿಸಲಾಗದ ಹಿಂಸೆ ಮತ್ತು ಹೊಡೆತಗಳು.ಪುಟ್ಟದಾದರೂ ಮನೆಯ ಬಾಡಿಗೆ, ಮಕ್ಕಳ ಶಾಲೆಯ ಫೀಹಣ, ಪುಸ್ತಕ ಬಟ್ಟೆ ಬರೆ ಆರೋಗ್ಯದ ಸಮಸ್ಯೆಗಳಿಗಾಗಿ ಹಣ ಸಾಲದೆ ತಾನು ಕೆಲಸ ಮಾಡುವ ಕಡೆ ಇಡೀ ದೇಹವನ್ನು ಮುದುರಿ ಬಾಗಿಸಿ ಹಣಕ್ಕಾಗಿ ಇನ್ನಿಲ್ಲದ ಯಾಚನೆ ಮಾಡುವುದು ಆಕೆ ಪಡೆದುಕೊಂಡು ಬಂದಿರುವ ಸೌಭಾಗ್ಯ. ದುಡ್ಡು ಕೊಟ್ಟ ಮಾಲಕರು ಆಕೆಯನ್ನು ಕೊಂಡುಕೊಂಡಂತೆ ಬೇಕಾಬಿಟ್ಟಿಯಾಗಿ ಕೆಲಸ ಮಾಡಿಸಿಕೊಳ್ಳುವುದನ್ನು ಅನಿವಾರ್ಯವಾಗಿಯಾದರೂ ಆಕೆ ಸಹಿಸಿಕೊಳ್ಳಲೇಬೇಕು. ಹಾಗಾದರೆ ಸ್ತ್ರೀ ಶೋಷಣೆಗೆ ಮುಕ್ತಿ ಇಲ್ಲವೇ ? ಅಂತಹ ಹೆಣ್ಣು ಮಕ್ಕಳು ಕೂಡ ಸಾಮಾಜಿಕವಾಗಿ ತಲೆಯೆತ್ತಿ ಬದುಕಲು ಸಾಧ್ಯವಾಗುವಂತಹ ಜೀವನವನ್ನು ಸಾಗಿಸುವುದು ಶಕ್ಯವೇ?

ಅದೆಷ್ಟೇ ಹೆಣ್ಣು ಮಕ್ಕಳ ಪರ ಕಾನೂನುಗಳು ಬಂದಿದ್ದರೂ ಸ್ವಾತಂತ್ರ್ಯದ ಏಳೆಂಟು ದಶಕಗಳು ಕಳೆದು ಹೋದರೂ ಹೆಣ್ಣು ಮಕ್ಕಳ ನೋವಿನ ಇನಿ ದನಿಗೆ ಕಿವಿಗೊಟ್ಟವರಿಲ್ಲ ಎಂಬುದು ವಿಪರ್ಯಾಸದ ಸಂಗತಿ.

ಖುದ್ದು ಹೆಣ್ಣು ಮಕ್ಕಳೇ ಮರ್ಯಾದೆಯ ಕಾರಣವನ್ನು ಒಡ್ಡಿ ತಮಗಾಗುವ ತೊಂದರೆಗಳನ್ನು ಹೇಳಿಕೊಳ್ಳುವುದಿಲ್ಲ. ತೀರಾ ಅನಿವಾರ್ಯವಲ್ಲದ ಹೊರತು ಪೊಲೀಸ್ ಠಾಣೆಯ ಮೆಟ್ಟಿಲನ್ನಂತೂ ಹತ್ತುವುದೇ ಇಲ್ಲ. ಗಂಟಲಿನ ಆಚೆ ಹೆಣ್ಣು ಮಕ್ಕಳ ಧ್ವನಿ ಹೊರಬರದಂತೆ ನಮ್ಮ ಪುರುಷ ಪ್ರಧಾನ ಸಮಾಜ ಆಕೆಯ ಬಾಯಿ ಮುಚ್ಚಿಸಿದರೆ ಮತ್ತೆ ಕೆಲವೊಮ್ಮೆ ಸಾಮಾಜಿಕ ತುಚ್ಚೀಕರಣಗಳು ಆಕೆಯನ್ನು ಸುಮ್ಮನಾಗಿಸುತ್ತವೆ. ಕೌಟುಂಬಿಕ ಸಾಮರಸ್ಯವನ್ನು ಕಾಯ್ದುಕೊಳ್ಳಲು ಪ್ರತಿ ಬಾರಿಯೂ ಹೆಣ್ಣೇ ಬಲಿಪಶುವಾಗಬೇಕೇ ?

ಕುಟುಂಬದ ಎಲ್ಲಾ ಸದಸ್ಯರ ಹೊಟ್ಟೆ ಬಟ್ಟೆ ನೋಡಿಕೊಳ್ಳುವ, ಆರೋಗ್ಯ ಸಮಸ್ಯೆಗಳಿಗೆ ತಲೆ ಕೊಡುವ ತಮ್ಮ ಗಂಡನ ಕುಡಿತಕ್ಕೂ ದುಡ್ಡು ಕೊಡುವ ಅನಿವಾರ್ಯತೆ ಆಕೆಯದ್ದು. ಇಷ್ಟಾಗಿಯೂ ಛಲ ಬಿಡದೆ ಕೂಲಿ ನಾಲಿ ಮಾಡಿ, ನಾಲ್ಕು ಮನೆ ಮುಸುರೆ ತಿಕ್ಕಿ, ಬೇರೆಯವರ ಮನೆಯಲ್ಲಿ ಅಡುಗೆ ಕೆಲಸ ಮಾಡಿ, ಇಟ್ಟಿಗೆ, ಕಲ್ಲು ಹೊರುವ, ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ, ಹೋಟೆಲ್ಗಳಲ್ಲಿ, ಗಾರ್ಮೆಂಟ್ ಗಳಲ್ಲಿ ದುಡಿಯುವ ತನ್ನ ಕುಟುಂಬಕ್ಕಾಗಿ ತನ್ನ ದೈಹಿಕ ಆರೋಗ್ಯವನ್ನು ಕಡೆಗಣಿಸಿ ಕಾರ್ಯನಿರ್ವಹಿಸುವ ಮಹಿಳೆ ತನಗಾಗಿ ತನ್ನ ಪ್ರೀತಿ ಪಾತ್ರರಿಂದ ಬಯಸುವುದೇನು ಗೊತ್ತೇ? ಹಿಡಿಯಷ್ಟು ಪ್ರೀತಿ ವಿಶ್ವಾಸ.

ಇಂತಹ ಮಹಿಳೆಯರು ಯಾವತ್ತೂ ಕಷ್ಟಗಳಿಗೆ ಅಂಜುವುದಿಲ್ಲ, ಅಳುಕಂತೂ ಇಲ್ಲವೇ ಇಲ್ಲ, ದೂರದಲ್ಲೆಲ್ಲೋ ತಮ್ಮ ಬದುಕಿನಲ್ಲೂ ಸಂತಸದ ಬೆಳ್ಳಿ ಕಿರಣ ಗೋಚರಿಸಬಹುದು ಎಂಬ ಆಸೆಯಿಂದ ಕಾಯುವ ಅದಮ್ಯ ಧೀಶಕ್ತಿಯ ಕೋಟ್ಯಂತರ ಹೆಣ್ಣು ಮಕ್ಕಳಿಗೆ ನನ್ನ ನಮನಗಳು.

# ಜಿಲ್ಲೆ ಅಭಿವೃದ್ಧಿಗಾಗಿ ಶ್ರಮಿಸೋಣ: ಡಿಸಿ

**ಮೊದಲ ಪುಟದಿಂದ**



ರಟ್ಟಗಲ್ಲ ಸೂಗಮ್ಮ, ಹಟಿ ಗುರುಬಸವ್ವ ಹಾಗೂ ಸೀತಮ್ಮ ಬಡಿಗೇರ ಮುಂತಾದ ಮಹಿಳಾ ಮುಖಂಡರು ತ್ರಿವರ್ಣ ಧ್ವಜ ಹಿಡಿದು ವಂದೇ ಮಾತರಂ ಘೋಷಣೆ ಕೂಗುತ್ತಾ ಈ ಭಾಗದ ಜನರಲ್ಲಿ ಧೈರ್ಯ ತುಂಬಿದರು. ವಿದ್ಯಾರ್ಥಿ ಮುಖಂಡರುಗಳಾದ ಮತಮಾರಿ ನಾಗಪ್ಪ, ಚಂದ್ರಯ್ಯ, ಶರಭಯ್ಯ ಬಸವಣ್ಣ ಮುಂತಾದವರು ಕಲ್ಯಾಣ ಕರ್ನಾಟಕ ವಿಮೋಚನೆಗೆ ಹೋರಾಡಿ ದರು. ಅಲ್ಲದೇ ಕಲಬುರಗಿ ಆರ್ಯ ಸಮಾಜ ಚಳುವಳಿ ಹಾಗೂ ಮತ್ತಿತರ ಸಂಘ ಸಂಸ್ಥೆಗಳ ಹೋರಾಟಕ್ಕೆ ಇಳಿದು ರಜಾಕಾರರ ದಬ್ಬಾಳಿಕೆಯನ್ನು ಧಿಕ್ಕರಿಸಿ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ಯಶಸ್ವಿಯಾದರು, ಇವರನ್ನೆಲ್ಲಾ ನಾವು ಇಂದು ಸ್ಮರಿಸಬೇಕಾಗಿದೆ ಎಂದು ಹೇಳಿದರು.

ಬ್ರಿಟೀಷರ ಕುಮ್ಮಕ್ಕುನಿಂದ ಹೈದ್ರಾಬಾದ್ ಪ್ರಾಂತ್ಯವನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದ ನಿಜಾಮರ ವಿರುದ್ದ ಭಾರತದ ಉಕ್ಕಿನ ಮನುಷ್ಯ ಸರ್ದಾರ ವಲ್ಲಭಬಾಯಿ ಪಟೇಲರು, 1948 ರ ಸೆಪ್ಟೆಂಬರ್ 13 ರಂದು ದಿಟ್ಟತನದಿಂದ ಭಾರತದ ಸೇನೆಯ ಮುಖಂಡ ಜನರಲ್ ಚೌಧ್ರಿ ನೇತೃತ್ವದಲ್ಲಿ ಕೈಗೊಂಡ ಪೊಲೀಸ್ ಕಾರ್ಯಚರಣೆ ಯಲ್ಲಿ ಹೈದ್ರಾಬಾದ್ ನಿಜಾಮರು ಶರಣಾಗಿ ಭಾರತದ ಒಕ್ಕೂಟ ವ್ಯವಸ್ಥೆಗೆ ಸೇರ್ಪಡೆ ಗೊಳ್ಳಲು ಒಪ್ಪಿಕೊಂಡರು. 1948 ರ ಸೆಪ್ಟೆಂಬರ್ 17 ರಂದು ರಾಜ್ಯದ ಇತರ ಭಾಗಗಳಂತೆ ಸ್ವಾತಂತ್ರ್ಯವಾಗಿ ಉಸಿರಾಡಲು ಸಾಧ್ಯವಾಯಿತು ಎಂದರು.

ಕಾರ್ಯಕ್ರಮದ ಅಂಗವಾಗಿ ಹಿಟ್ನಾಳನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ.ಬಸವರಾಜ ಟಿ.ಹೆಚ್ ಅವರು ವಿಶೇಷ ಉಪನ್ಯಾಸ ನೀಡಿದರು.

ಹುಡಾ ಅಧ್ಯಕ್ಷರಾದ ಹೆಚ್.ಎನ್. ಎಫ್ ಇಮಾಮ್ ನಿಯಾಜಿ, ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ಜಿಪಂ ಸಿಇಓ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ, ಎಸ್ಪಿ ಶ್ರೀಹರಿ ಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಪರೇಡ್ ಕಮಾಂಡರ್ ಶಶಿಕುಮಾರ್ ನೇತೃತ್ವದಲ್ಲಿ ಪೊಲೀಸ್, ಗೃಹರಕ್ಷದಳ, ಎನ್.ಸಿ.ಸಿ., ಗೈಡ್ಸ್, ಸೇವಾದಳ, ವಿವಿಧ ಶಾಲೆಗಳು ಒಳಗೊಂಡಂತೆ ಒಟ್ಟು 08 ತಂಡಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಮರ್ಕ್ರಮಗಳು ನಡೆದವು. ಕೆ.ಬಸವ ರಾಜ ಮತ್ತು ನಾಗರಾಜ ನಿರೂಪಿಸಿದರು. ಶಾಲಾ ಮಕ್ಕಳು, ಸಾರ್ವಜನಿಕರು ಪಾಲ್ಗೊಂಡಿದ್ದರು.

# ತಂದೆ ಇಲ್ಲದ ಮಕ್ಕಳಿಗೆ ಸ್ಕಾಲರ್‌ಶಿಪ್ ವಾಟ್ಸಪ್ ವದಂತಿ ನಂಬಬೇಡಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣದವಾದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ತಂದೆ ಇಲ್ಲದ ಮಕ್ಕಳ ಖಾತೆಗೆ ವರ್ಷಕ್ಕೆ 24,000 ರೂ.ಗಳ ಸ್ಕಾಲರ್‌ಶಿಪ್ ಸೌಲಭ್ಯ ನೀಡುವರು ಎಂದು ಸಂದೇಶವನ್ನು ರವಾನಿಸಿ ಜನರನ್ನು ಗೊಂದಲಕ್ಕೀಡು ಮಾಡುತ್ತಿದ್ದಾರೆ. ಸಾರ್ವಜನಿಕರು ಈ ರೀತಿಯ ಸಂದೇಶಕ್ಕೆ ಹಾಗೂ ಆಮಿಷಗಳಿಗೆ ಒಳಗಾಗಿ ಮಧ್ಯವರ್ತಿಗಳಿಗೆ ಹಣ ನೀಡಿ ಮೋಸ ಹೋಗಬಾರದೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಪ್ರಾಯೋಜಕತ್ವ ಕಾರ್ಯಕ್ರಮದ ಮಾರ್ಗಸೂಚಿ ಅನ್ವಯ ಮಕ್ಕಳನ್ನು ಕುಟುಂಬದ ವಾತಾವರಣದಲ್ಲಿ ಬೆಂಬಲ ನೀಡುವುದು ಪ್ರಾಯೋಜಕತ್ವ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. 18 ವರ್ಷದೊಳಗಿನ ಮಕ್ಕಳಿಗೆ ಪ್ರಾಯೋಜಕತ್ವ ಕಾರ್ಯಕ್ರಮವನ್ನು ವಿಜಯನಗರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಾಯೋಜಕತ್ವ ಕಾರ್ಯಕ್ರಮದ ವಿವರ: ಮಕ್ಕಳನ್ನು ಗುರುತಿಸಲು ಕೆಲವು ವಿಶೇಷ ಮಾನದಂಡಗಳು ಇದ್ದು, ಬಾಲಮಂದಿರ, ವೀಕ್ಷಣಾಲಯಗಳಿಂದ ಕುಟುಂಬಗಳಿಗೆ ಮರಳಿದ ಮಕ್ಕಳು, ಪೋಕ್ಸೋ ಸಂತ್ರಸ್ತ ಮಕ್ಕಳು, ತಾಯಿ ವಿಧವೆ ಅಥವಾ ವಿಚ್ಛೇದಿತ ಅಥವಾ ಕುಟುಂಬದಿಂದ ಪರಿತ್ಯಕ್ತಳಾಗಿದ್ದರೆ, ಅನಾಥಮಕ್ಕಳು, ವಿಸ್ತೃತ ಕುಟುಂಬದೊಂದಿಗೆ ವಾಸಿಸುತ್ತಿದ್ದರೆ, ಪೋಷಕರು ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿದ್ದಲ್ಲಿ, ಪೋಷಕರು ಮಕ್ಕಳನ್ನು ನೋಡಿಕೊಳ್ಳಲು ದೈಹಿಕವಾಗಿ ಮತ್ತು ಆರ್ಥಿಕವಾಗಿ ಅಸಮರ್ಥರಾಗಿದ್ದರೆ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯಿದೆ. 2015 ರ ಪ್ರಕಾರ ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳು ಅಂದರೆ, ಮನೆ ಇಲ್ಲದೆ ನೈಸರ್ಗಿಕ ವಿಕೋಪಕ್ಕೆ ಒಳಗಾದವರು, ಬಾಲ ಕಾರ್ಮಿಕರು, ಬಾಲ್ಯ ವಿವಾಹ ಸಂತ್ರಸ್ತ ಮಕ್ಕಳು, ಕಳ್ಳಸಾಗಣೆಗೊಳಗಾದ ಮಕ್ಕಳು, >>4

## ಕವಿ ಮನಸು

### ಸುಂದರ ಘಳಿಗೆ



ಹುಣ್ಣಿಮೆ ಚಂದ್ರಮ ಮೂಡಿದ ಬಾನಲಿ
ತಣ್ಣನೆ ಗಾಳಿಯ ಕೂಡಿ
ಬಣ್ಣನೆ ಗೈಯಲು ಪದಗಳು ದೊರೆಯದು
ಕಣ್ಣನು ಸೆಳೆಯುವ ಮೋಡಿ

ಚಂದಿರನೊಂದಿಗೆ ಚುಕ್ಕಿಗಳಿರುವವು
ಬಂಧವು ಬೆಳೆಸಿದೆ ಸಲಿಗೆ
ಚಂದದಿ ಮಿಣಮಿಣ ಮಿನುಗುತಲಿರುವವು
ಸುಂದರವೆನಿಸಿದೆ ಘಳಿಗೆ

ತೆಂಗಿನ ಮರಗಳ ನಡುವಲಿ ಇಣುಕುವ
ಸಂಗಡ ತಾರೆಯು ಜೊತೆಗೆ
ಮಂಗಳದಾಯಿನಿ ಭೂಮಿಯ ಕಾಣುವ
ಇಂಗದ ಬಯಕೆಯು ಅವಗೆ

ದೂರದ ಚಂದ್ರಗೆ ಗಗನವು ಸಾಲದೆ
ತೋರುವ ಕೌತುಕವೇಕೆ
ಭೂರಮೆ ಬೆಳಗಲು ನೀಡುವ ವಂತಿಗೆ
ಬೀರುವ ಬೆಳ್ಳಿಯ ಬೆಳಕೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಘನವಂತ

ಸಂಕೋಚ
ಮನುಷ್ಯನನ್ನು
ಸಣ್ಣವನನ್ನಾಗಿ ಮಾಡುವುದು!

ಧೈರ್ಯ
ಮನುಷ್ಯನನ್ನು
ಭಲಶಾಲಿ ಮಾಡುವುದು!

ಬಂಡತನ
ಮನುಷ್ಯನನ್ನು
ಲಜ್ಜೆಗೆಟ್ಟವ ಮಾಡುವುದು!

ಉಧಾರಿತನ
ಮನುಷ್ಯನನ್ನು
ಧರ್ಮಿಷ್ಠನನ್ನಾಗಿಸುವುದು!

ಮಿತ ಭಾಷೆ
ಮನುಷ್ಯನನ್ನು
ಘನವಂತಮಾಡುವುದು!

– ಚಂದ್ರಶೇಖರಯ್ಯ ರೋಣದಮಠ

### ಪುಸ್ತಕ

ಸದಭಿರುಚಿಯ ಪುಸ್ತಕ
ಬೆಳಗುವುದು ನಮ್ಮ ಮಸ್ತಕ
ವ್ಯಕ್ತಿತ್ವ ವಿಕಸನದ.ದ್ಯೋತಕ
ಅಧ್ಯಯನವು ಆಗಲಿ ಕಾಯಕ

ಕಳೆಯುತ ಮನಸಿನ ಅಂಧಕಾರ
ಅಳಿಸುತ ನಮ್ಮಯ ಅಹಂಕಾರ
ಮೊಳಗಿಸುತ ಜ್ಞಾನದ ಝೇಂಕಾರ
ಆತ್ಮಕೆ ಅರಿವಿನ ಸಾಕಾರ

ಸಂಗಾತಿಯಾಗಲಿ ಹೊತ್ತಗೆ
ದಿನ ರಾತ್ರಿಯ ಯಾವುದೇ ಹೊತ್ತಿಗೆ
ಅಜ್ಞಾನಕೆ ಬಡಿಯುತ ಸುತ್ತಿಗೆ
ಅರಳುತ ಜ್ಞಾನಶಿಲ್ಪ ಮೆತ್ತಗೆ

– ಚೇತನ ಭಾರ್ಗವ ಬೆಂಗಳೂರು

## ಜಿಲ್ಲಾ ಪ್ರೋಗ್ರಾಂ ಕೋ-ಆರ್ಡಿನೇಟರ್ ಹುದ್ದೆಯ ಆಯ್ಕೆ ಪಟ್ಟಿಗೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಪ್ರೋಗ್ರಾಂ ಕೋ–ಆರ್ಡಿನೇಟರ್ ಹುದ್ದೆಯ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ. ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ನೇಮಾತಿಗೆ ದಿನಾಂಕ 21–10–2023ರಂದು ರಾಷ್ಟೀಯ ಆರೋಗ್ಯ ಅಭಿಯಾನದ ಯೋಜನೆ ಅಡಿಯಲ್ಲಿ ಜಿಲ್ಲಾ ಪ್ರೋಗ್ರಾಂ ಕೋ–ಆರ್ಡಿನೇಟರ್ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ ಆ ಹುದ್ದೆಯ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆಪಟ್ಟಿ ಹಾಗೂ ತಿರಸ್ಕೃತ ಪಟ್ಟಿಗಳನ್ನು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದ್ದು, ಸೆಪ್ಟೆಂಬರ್ 23ರ ಸಂಜೆ 5.30ರೊಳಗಾಗಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಬಹುದು.

# ಜೀತ ಮಾಡುತ್ತಲೆ ಹಾಡಿಕೆಗೆ ಒಲಿದ ಇಮಾಮ್ ಸಾಬ್ ವಲ್ಲೆಪ್ಪನವರ್

ಮುಟ್ಟೀನ ಒಲೆಯಲಿ ಹುಟ್ಟೋದು ಜಗವೆಲ್ಲಾ
ಮಟ್ಟಬ್ಯಾಡ ಅನ್ನಾವನು ಎಲ್ಲಿ ಹುಟ್ಯಾನಾ

ಜಾತಿ ಜಾತಿ ಅಂತ ನಾವು ಜಗಳ ಮಾಡತೇವ್ರಿ ತಮ್ಮಾ
ಜಾತಿ ಒಳಗ ನೀತಿ ಮಾರ್ಗ ಮರತ ನಿಂತವ್ರೀ ॥2॥

ಸುಣ್ಣಗಾರ ಮನೆಯ ಸುಣ್ಣ ತಂದು ಮನಿ ಸಾರಿಸೇವ್ರೀ
ತಮ್ಮಾ, ವಡ್ಡರ ಮನೆಯ ಒಳ್ಳ ತಂದು ಇಂಡಿ ಅರದೇವ್ರೀ ॥2॥
ತಮ್ಮಾ, ಮತ್ತೂ ನಾವು ದೊಡ್ಡವರೆಂದು ಶೀಲ ಮಾಡೆವ್ರೀ

ಕುಂಬಾರ ಮಾಡಿದ ಗಡಿಗಿ ತಂದು ಅಡಿಗಿ ಮಾಡೇವ್ರೀ
ಬಡಿಗೇರ ಮಾಡಿದ ಕೊಮಣಿಗ್ಯಾಗ ರೊಟ್ಟಿ ಮಾಡೇವ್ರೀ ॥2॥
ತಮ್ಮಾ, ಕಮ್ಮಾರ ಮಾಡಿದ ಹೆಂಚಿನ ಮ್ಯಾಲ ರೊಟ್ಟಿ ಸುಡತೇವ್ರೀ
ಮ್ಯಾದರ ಮಾಡಿದ ಬುಟ್ಟಿಯೊಳಗ ರೊಟ್ಟಿ ಹಾಕ್ತೇವ್ರೀ ॥2॥
ತಮ್ಮಾ, ಮತ್ತೂ ನಾವು ಹೆಚ್ಚಿನವರೆಂದು ಶೀಲ ಮಾಡೇವ್ರೀ

ಪಿಂಜಾರ ಮಾಡಿದ ಗಾದಿ ಮೇಲೆ ನಿದ್ದಿ ಹೊಡಿತೀವ್ರೀ
ತಮ್ಮಾ, ಕುರುಬರು ಮನೇನ ಕಂಬಳಿ ತಂದು ಗದ್ದಿಗಿ ಮಾಡೇವ್ರೀ ॥2॥
ಗದ್ದಿಗಿ ಮ್ಯಾಲೆ ಸಿದ್ದಾರೂಢರ ಪೂಜೆ ಮಾಡೆವ್ರೀ

ಕ್ಯಲ್ಸೆರ್ ಮುಂದೆ ಡೊಗ್ಗಿ ನಾವು ತೆಲಿ ಬೋಳಿಸೇವ್ರೀ
ತಮ್ಮಾ, ಚಿಮಿಗ್ಯಾರ ಹೊಲದ ಅಂಗಿ ತೊಟ್ಟು ದೇವರಿಗೋಗ್ತೇವ್ರೀ..
ಹೂಗಾರ ಮನೆಯ ಹೂವ ತಂದು ದೇವರಿಗಿಡತೇವ್ರೀ ॥2॥
ತಮ್ಮಾ, ಮತ್ತೂ ನಾವು ಹೆಚ್ಚಿನವರೆಂದು ಶೀಲ ಮಾಡೇವ್ರೀ

ಸಮಗಾರ ಮಾಡಿದ ಚಪ್ಪಲ್ ತೊಟ್ಟು ಲಗ್ಗನ್ ಆಗೇವ್ರೀ
ಮುತ್ತಗಾರ ಮಾಡಿದ ಮೂಗಬಟ್ಟು ತಂದು ಹೆಂಡರಿಗಿಟ್ಟೆವ್ರೀ ॥2॥
ಬಳಿಗಾರ ಮಾಡಿದ ಬಳಿ ತಂದು ಕೈಯಾಗ್ ಇಡತೇವ್ರೀ
ತಮ್ಮಾ, ಮತ್ತೂ ನಾವು ಹೆಚ್ಚಿನವರೆಂದು ಶೀಲ ಮಾಡೇವ್ರೀ

ಮುಲ್ಲಾಸಾಬರ ಕರದು ಬ್ಯಾಟಿ ಚೂರಿ ಹಾಕೇವ್ರೀ
ತಮ್ಮಾ, ಚೂರಿಹಾಕಿದ ಬ್ಯಾಟಿ ನಾವ ಊಟ ಮಾಡೇವ್ರೀ
ತಮ್ಮಾ, ಮತ್ತೂ ನಾವು ಹೆಚ್ಚಿನವರೆಂದು ಶೀಲ ಮಾಡೇವ್ರೀ

ಕುಂಚಿಕೊರವರು ಮಾಡಿದ ನಲುವು ಅಡಿಗೆ ಮನಿಯಾಗರೀ
ತಮ್ಮಾ, ನಲಿವಿನ ಮೇಲೆ ಹಾಲಿನ ಗಡಗಿ ಇಡಾಕತ್ತೇವ್ರೀ ॥2॥
ತಮ್ಮಾ, ಹೆಪ್ಪ ಹಾಕಿ ಬೆಣ್ಣಿ ಕಡದು ತೆಗಿಯಾಕತ್ತೇವ್ರೀ
ತಮ್ಮಾ, ಬೆಣ್ಣಿ ಕಾಯಿಸಿ ಎಣ್ಣಿ ಬತ್ತಿ ಹಚ್ಚಾಕಚ್ಚೀವ್ರೀ ॥2॥

ತಮ್ಮಾ ಜಾತಿ ಜಾತಿ ಅಂತ ನಾವು ಜಗಳ ಮಾಡತೇವ್ರಿ
ತಮ್ಮಾ ಜಾತಿ ಒಳಗ ನೀತಿ ಮಾರ್ಗ ಮರತ ನಿಂತೇವ್ರೀ


ಈ ಪದ ಯೂಟೂಬಿನಲ್ಲಿ ತುಂಬಾ ಜನಪ್ರಿಯ. ಕೋಟ್ಯಾಂತರ ಜನ ಕೇಳಿದ್ದಾರೆ, ಅನುಕರಿಸಿ ಹಾಡಿದ್ದಾರೆ. ಕವಿಯು ಮನುಷ್ಯನ ಮೂಲಭೂತ ಅಗತ್ಯಗಳ ಪೂರೈಕೆಯಲ್ಲಿ ಎಷ್ಟು ಸಮುದಾಯಗಳ ಶ್ರಮ ಬೆರೆತಿದೆ ಎನ್ನುವ ಸೋಷಿಯಲ್ ಇಂಜಿನಿಯರಿಂಗ್ ಬಗ್ಗೆ ಮಾತನಾಡುತ್ತಿದ್ದಾನೆ. ದಿನನಿತ್ಯದ ಬದುಕಿನೊಳಗಿಂದ ಹೆಕ್ಕಿ ಪದ ಕಟ್ಟಿದ್ದಾನೆ. ಬೆಳಗ್ಗೆ ರೊಟ್ಟಿ ಮಾಡುವುದರಿಂದ ಮೊದಲುಗೊಂಡು ಮಲಗುವ ತನಕ ಮನುಷ್ಯ ಬಳಸುವ ವಸ್ತುಸಂಗತಿಗಳನ್ನು ಬೇರೆ ಬೇರೆ ಸಮುದಾಯಗಳು ತಯಾರಿಸುತ್ತವೆ. ಹೀಗೆ ಕುಲಕಸುಬಿನ ಸಮುದಾಯಗಳನ್ನು ಕೆಳಜಾತಿಗಳೆಂದು ಹೀಗಳೆದು ದೊಡ್ಡ ಜಾತಿವರೆಂದು ಬೀಗುವಿಕೆಯನ್ನು ಟೀಕಿಸುತ್ತಾರೆ. ಈ ಕಟು ಸತ್ಯವನ್ನು ಹಾಡಿದವರು ಹುಬ್ಬಳ್ಳಿಯ ಇಮಾಮ ಸಾಬ್ ಮಹಮದ್ ಸಾಬ್ ವಲ್ಲೆಪ್ಪನವರ್.

ನೀವು ಅಂತರ್ಜಾಲದಲ್ಲಿ ಯೂಟೂಬ್ ತೆರೆದು ಇಮಾಮ್ ಸಾಬ್ ವಲ್ಲೆಪ್ಪನವರ್ ಎಂದು ಟೈಪಿಸಿದರೆ ನೂರಾರು ಹಾಡಿನ ಲಿಂಕುಗಳು ತೆರೆದುಕೊಳ್ಳುತ್ತವೆ. ಕುತೂಹಲಕ್ಕೆ ಒಂದು ಹಾಡನ್ನು ಎಷ್ಟುಜನ ಕೇಳಿದ್ದಾರೆ ಎಂದು ಗಮನಿಸಿದರೆ, ಲಕ್ಷಗಟ್ಟಲೆ ಕೇಳುವಿಕೆಯ ಸಂಖ್ಯೆ ಕಾಣುತ್ತದೆ. ಮೇಲೆ ಉಲ್ಲೇಖಿಸಿದ 'ಜಾತಿ ಜಾತಿ ಅಂತ' ಪದ ಉತ್ತರಕರ್ನಾಟಕದ ರಾಷ್ಟ್ರಗೀತೆಯಂತೆ



ಜನಪ್ರಿಯ. ಹೀಗೆ ಎರಡು ದಶಕದಿಂದ ಅಂತರ್ಜಾಲದಲ್ಲೂ ಸ್ಟಾರ್ ಗಿರಿ ಕಾಯ್ದುಕೊಂಡ ಇಮಾಮಸಾಬ್ ಅವರ ಬದುಕಿನ ಪುಟಗಳು ಕುತೂಹಲಕಾರಿಯಾಗಿವೆ.

ನವಲಗುಂದ ತಾಲೂಕಿನ ನಾಗನೂರು ಎನ್ನುವ ಪುಟ್ಟ ಊರಿನಲ್ಲಿ ಸೈದಮ್ಮ ಮತ್ತು ಮಹಮದ್ ಸಾಬ್‌ರ ಮಗನಾಗಿ ಇಮಾಮ್ ಹುಟ್ಟುತ್ತಾರೆ. ಮಗುವಾಗಿದ್ದಾಗ ಜನಪದ ಹಾಡಿಕೆಯೇ ಇಮಾಮರಿಗೆ ಲಾಲಿ ಪದಗಳಾಗಿದ್ದವು. ಅವ್ವ ಸೈದಮ್ಮ ಅಡುಗೋಡಿ ಅವರು ತತ್ವಪದಗಳನ್ನು ಹಾಡುತ್ತಿದ್ದರು. ತಂದೆಯ ತಂದೆ ಮುತ್ತಜ್ಜ ದೌಲ್‌ಸಾಬರೂ ಹಾಡುತ್ತಿದ್ದರಂತೆ. ಹಾಗಾಗಿ ಇಮಾಮರು ಹಾಡಿಕೆ ಪರಂಪರೆಯ ಮನೆಯಲ್ಲಿ ಹುಟ್ಟಿ ಬೆಳೆಯುತ್ತಾರೆ. ಮನೆಯಲ್ಲಿ ಕಲೆಯೇನೋ ಶ್ರೀಮಂತವಾಗಿತ್ತು, ಆದರೆ ಮಕ್ಕಳನ್ನು ಸಾಕಲು ಆಗದ ಕಿತ್ತು ತಿನ್ನುವ ಬಡತನ. ಹಾಗಾಗಿ ಸೈದಮ್ಮ ಇಮಾಮರನ್ನು ಶಾಲೆಗೆ ಸೇರಿಸಲಾಗದೆ ನರಗುಂದದಲ್ಲಿ ಹಾಲುಮತದ ಸಿಂಗಾಡೆರ ಮನೆತನದ ಸಿದ್ಲಿಂಗಪ್ಪ ಸಿಂಗಾಡಿ ಅವರ ಮನೆಯಲ್ಲಿ ಕುರಿ ಕಾಯಲು ಜೀತಕ್ಕಿಡುತ್ತಾರೆ. ಮುಂದೆ ವೆಂಕಪ್ಪ ಕರ?ಲಪ್ಪನವರ ಮೊದಲಾದ ಮೂರು ಮನೆತನಗಳಲ್ಲಿ ಇಮಾಮರು ತನ್ನ ತಮ್ಮ ದೌಲಸಾಬನೊಂದಿಗೆ ಹನ್ನೊಂದು ವರ್ಷ ಜೀತ ಮಾಡುತ್ತಾರೆ. ಮುಂದೆ ಇಮಾಮರಿಗೆ ಕುರಿ ಕಾಯುವ ಬಯಲ ಆಲಯವೇ ಹಾಡಿಕೆ ಕಲಿಯುವ ಶಾಲೆಯೂ ಆಯಿತು. ನರಗುಂದದ ಸುತ್ತಮುತ್ತಣ ಹಳ್ಳಿಗಳ ರಾತ್ರಿಗಳಲ್ಲಿ ರಂಗೇರುತ್ತಿದ್ದ ಡೊಳ್ಳಿನ ಹಾಡಿಕೆಯ ಸೆಳೆತಕ್ಕೆ ಇಮಾಮರು ಒಳಗಾಗುತ್ತಾರೆ. ಅಂಬರಗೊಳ್ಳದ ನಿಂಗಪ್ಪ ಪೂಜಾರ ಮೊದಲಗುರುವಾಗಿ ಹಾಡಿಕೆಯ ಲಯಗಾರಿಕೆಯನ್ನು ಕಲಿಸುತ್ತಾರೆ. ಇಮಾಮರ ಅಕ್ಕ ದಾವುಲಬಿ ಕೂಡ ಸೋಬಾನೆ ಪದಗಳನ್ನು ಹಾಡುತ್ತಾರೆ.



**ಅರುಣ್ ಜೋಳದ ಕೂಡ್ಲಿಗಿ**

Scan For Digital Colourful
HAMPI TIMES E-paper

ಜೀತದಿಂದ ಮುಕ್ತಿ ಪಡೆದು ಧಾರವಾಡದಲ್ಲಿ ಆರಂಭವಾದ ಟೈವಾಕ್ ಕಂಪನಿಯಲ್ಲಿ ಕಸ ಹೊಡೆಯುವ ಕೆಲಸಕ್ಕೆ ಸೇರುತ್ತಾರೆ. ಇಲ್ಲಿ ಕೆಲಸ ಮಾಡುತ್ತಲೆ ನಾಲ್ಕು ಅಕ್ಷರ ಕಲಿಯುತ್ತಾರೆ. ಮುಂದೆ ಟೈಲರಿಂಗ್ ಕಲಿತು ಸ್ವಂತ ದುಡಿಮೆಗೆ ಅಣಿಯಾಗುತ್ತಾರೆ. ಈ ಹೊತ್ತಿಗೆ ಬಾಲ್ಯದಿಂದಲೂ ತನ್ನೂರಿನ ಶರಣ ಆತ್ಮಾನಂದರ ಒಡನಾಟಕ್ಕೆ ಬರುತ್ತಾರೆ. ಇವರ ಪ್ರವಚನ ಕೇಳುತ್ತಾ ತನ್ನ ಹಾಡಿಕೆಗೆ ಆದ್ಯಾತ್ಮದ ಸ್ಪರ್ಶ ಪಡೆಯುತ್ತಾರೆ. ನಾಗನೂರಲ್ಲಿಯೇ ಸೋದರ ಮಾವನ ಮಗಳಾದ ಅಲೀನಳನ್ನು ಮದುವೆಯಾಗುತ್ತಾರೆ. ಹಾಡಿಕೆಯನ್ನು ನಿಧಾನಕ್ಕೆ ಬದುಕಿನ ಭಾಗವಾಗಿಸಿಕೊಳ್ಳುತ್ತಾರೆ. ಹೀಗಾಗಿ ತಮ್ಮದೆ ಒಂದು ಭಜನಾ ಸಂಘವನ್ನು ಕಟ್ಟಿಕೊಳ್ಳುತ್ತಾರೆ. ಇದಕ್ಕೆ 'ಆತ್ಮಾನಂದ ಜಾನಪದ ಕಲಾವಿದರ ಸಂಘ' ಎಂದು ಹೆಸರಿಡುತ್ತಾರೆ. ಹೀಗೆ ಹಾಡಿಕೆಯ ಪಯಣವನ್ನು ಆರಂಭವಾಗುತ್ತದೆ.

ಈ ಹಾಡಿಕೆ ಪಯಣದಲ್ಲಿ ಮಹಾಲಿಂಗಪುರದ ಇಬ್ರಾಹಿಂ ಸುತಾರರ ಬೇಟಿ ಇಮಾಮಸಾಹೇಬರ ಹಾಡಿಕೆಯ ಮತ್ತೊಂದು ಜಿಗಿತಕ್ಕೆ ಕಾರಣವಾಗುತ್ತದೆ. ಇಮಾಮರ ಆದ್ಯಾತ್ಮ ಲೋಕದ ಪರಿಚಯ ಮತ್ತಷ್ಟು ಆಳವಾಗುತ್ತದೆ. ಸುತಾರರ ಮಾರ್ಗದರ್ಶನ ಮತ್ತು ಪ್ರಭಾವ ಇಮಾಮರು ಆಳವಾಗಿ ತಟ್ಟುತ್ತದೆ. ಹೀಗಾಗಿ ಸುತಾರರ ಹಾಡಿಕೆ ಮತ್ತು ಸಂವಾದದ ಮಾದರಿಯನ್ನು ಅನುಕರಿಸುತ್ತಾರೆ. ಒಂದೇ ವೇದಿಕೆಯಲ್ಲಿ ಹಾಡುವುದು, ಸುತಾರರ ಮನೆಯಲ್ಲೆ ತಿಂಗಳುಗಟ್ಟಲೆ ಉಳಿದು ಅವರ ಮಾತುಗಳನ್ನು ಆಲಿಸುವುದು ಇಮಾಮರ ಹಾಡಿಕೆಯ ದೃಷ್ಟಿಕೋನವನ್ನು ಬದಲಿಸುತ್ತದೆ. ಈತನಕ ನಿರ್ದಿಷ್ಟ ಗೊತ್ತುಗುರಿ ಇಲ್ಲದೆ ಹಾಡುತ್ತಿದ್ದ ಇಮಾಮರು ಸಮಾಜದ ಧಾರ್ಮಿಕ ಸೌಹಾರ್ಧತೆಗಾಗಿ, ಜಾತಿ ತಾರತಮ್ಯ ಮೀರುವುದಕ್ಕಾಗಿ ಹಾಡತೊಡಗುತ್ತಾರೆ. ಪರಿಣಾಮವಾಗಿ 'ಇಬ್ರಾಹಿಂ ಸುತಾರ ಸಾಮರಸ್ಯ ಸಂಸ್ಕೃತಿ ಸಂಸ್ಥೆ' ಕಟ್ಟುತ್ತಾರೆ.

ಇದೀಗ ಉತ್ತರಕರ್ನಾಟಕದ ಸಾವಿರಾರು ಹಳ್ಳಿಗಳಿಗೆ ಪ್ರತಿವರ್ಷವೂ ಹಾಡಿಕೆಗಾಗಿ ತಂಡಕಟ್ಟಿಕೊಂಡು ಅಲೆಯುತ್ತಾರೆ. ಯೂಟೂಬಿನ ಹಲವು ಚಾನಲ್ಲುಗಳಲ್ಲಿ ದಿನವೂ ಸಾವಿರಾರು ಜನರು ಇಮಾಮರ ಪದಗಳನ್ನು ಕೇಳುತ್ತಾರೆ. ಡೊಳ್ಳಿನ ಪದಗಳ ಮೂಲಕ ಹಾಡಿಕೆ ಆರಂಭಿಸಿ ರಿವಾಯ್ತ್ ಪದ, ಹಂತಿ ಪದ, ಸೋಬಾನ ಪದವನ್ನೂ ಹಾಡುತ್ತಾರೆ. ಇದೀಗ ಇಮಾಮರ ಹಾಡಿಕೆ ತಂಡದಲ್ಲಿ ಡೊಳ್ಳು ಬಾರಿಸುವ ಕುರುಬ ಸಮುದಾಯದ ದ್ಯಾಮಪ್ಪ ಕರಿಯಪ್ಪ ಪೂಜಾರ, ಕಂಜರ, ತಾಳ ಹಾಕುವ ವಕ್ಕಲಿಗರ ನಿಂಗಪ್ಪ ದೊಡ್ಡ ಪೂಜಾರ, ಇಮಾಮರ ತಮ್ಮನಾದ ದವಲಸಾಬ ವಲ್ಲೆಪ್ಪನವರ್, ಮಗ ಮಹಮದ್ ಗೌಸ್, ಅಳಿಯ ಹುಸೇನಸಾಬ್ ಅಂಗಡಿ ತಂಡದಲ್ಲಿದ್ದಾರೆ.

ಇಮಾಮರು ಶಿಶುನಾಳ ಶರೀಫರ ಸೌಹಾರ್ಧದ ಪದಗಳನ್ನೂ ಒಳಗೊಂಡಂತೆ ತತ್ವಪದ, ವಚನ, ದಾಸರ ಪದಗಳನ್ನೂ ಪ್ರಾಸಂಗಿಕವಾಗಿ ಹಾಡುತ್ತಾರೆ. ಇಮಾಮರ ಹಾಡಿಕೆಯ ಶಕ್ತಿಯೆಂದರೆ ಬದಲಾದ ಕಾಲಮಾನಕ್ಕೆ ತಕ್ಕನಾದ ಪದ ಕಟ್ಟಿ ಅವುಗಳನ್ನು ಜನಪದವನ್ನಾಗಿಸುವುದು. ಹೀಗಾಗಿ ಜಾತಿಯ ತಾರತಮ್ಯದ ಬಗ್ಗೆ, ಕನ್ನಡ ನಾಡು ನುಡಿ, ರೈತರ ಸಮಸ್ಯೆ, ಪರಿಸರ, ದಿನನಿತ್ಯದ ಜನರ ಕಷ್ಟಸುಖಗಳ ಬಗ್ಗೆ ಇಮಾಮರು ಕವಿಮಾಡಿ ಪದಕಟ್ಟಿದ್ದಾರೆ. ಈಚೆಗೆ ಐದಾರು ವರ್ಷದಿಂದ ಸಂವಿಧಾನದ ಬಗ್ಗೆ ಪದ ಕಟ್ಟಿ ಹಾಡುತ್ತಿದ್ದಾರೆ. ಬಿ.ಕೆ ಬಸವರಾಜ ಸೋದರ ಅವರು ಪದಗಳ ಲಿಪಿಕಾರರಾಗಿದ್ದಾರೆ. ಇಮಾಮರು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರಾಗಿಯೂ ಕೆಲಸ ಮಾಡಿದ್ದಾರೆ. 'ಹಾಡಿಕೆಲಿ ಭಯಂಕರ ಬ್ಯುಜಿ ಅಲ್ರೀ ಹಂಗಾಗಿ ಯುನಿವರ್ಸಿಟಿಗೆ ಹೋಗೋಕಾಗ್ತಿಲ್ಲ' ಎನ್ನುತ್ತಾರೆ. ಐದು ಮಕ್ಕಳಾದ ನಂತರ ಸಂಗಾತಿ ಅಲೀನ ಅಗಲುತ್ತಾರೆ. ನಂತರ ಸಂಸಾರ ತೂಗಿಸಲು ಶಾಹೀನ ಅವರನ್ನು ಮದುವೆಯಾಗುತ್ತಾರೆ. ಒಟ್ಟು ನಾಲ್ಕುಜನ ಹೆಣ್ಣುಮಕ್ಕಳು ಇಬ್ಬರು ಗಂಡು ಮಕ್ಕಳ ತುಂಬು ಸಂಸಾರವನ್ನು ಹಾಡಿಕೆಯ ಮೂಲಕವೇ ಸಲಹಿದ್ದಾರೆ.

ಹುಬ್ಬಳ್ಳಿಯ ಮಂಟೂರು ರೋಡ ಬ್ಯಾಳಿ ಪ್ಲಾಟಲ್ಲಿ ಪುಟ್ಟ ಮನೆಯಿರುವ ಇಮಾಮರು ಆಂದ್ರ ತಮಿಳುನಾಡು ಅಸ್ಸಾಂ ಮೊದಲಾದ ರಾಜ್ಯಗಳ ದೊಡ್ಡ ದೊಡ್ಡ ವೇದಿಕೆಗಳಲ್ಲಿ ಹಾಡಿದ್ದಾರೆ. ದಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆಯುವ ಕೃಷಿಮೇಳದಲ್ಲಿ ಕಳೆದ 21 ವರ್ಷದಿಂದ ರೈತರ ಬಗ್ಗೆ ಸಾವಯವ ಕೃಷಿಯ ಬಗ್ಗೆ ಪದ ಕಟ್ಟಿ ಹಾಡಿದ್ದಾರೆ. ರೇಡಿಯೋ ಮತ್ತು ದೂರದರ್ಶನದ ಮೂಲಕ ಇಮಾಮರು ಲಕ್ಷಾಂತರ ಜನರನ್ನು ತಲುಪಿದ್ದಾರೆ. ಕೃಷಿ, ಪರಿಸರ, ಆರೋಗ್ಯ, ಶಿಕ್ಷಣದ ಬಗ್ಗೆ ಇಮಾಮರು ಪದ ಕಟ್ಟಿದ್ದಾರೆ. ಜಾನಪದ ಅಕಾಡೆಮಿ, ಜಾನಪದ ಲೋಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೂಲತಃ ಪಿಂಜಾರ ಸಮುದಾಯದ ಅರಿಬಿ ಹೊಲೆಯುವ ಟೈಲರಿಂಗ್ ಕಾಯಕದ ಇಮಾಮರು ಸಮಾಜವನ್ನು ಹರಿದ ಧರ್ಮ ಮತ್ತು ಜಾತಿಯ ಭೇದಗಳನ್ನು ಜೋಡಿಸಿ ಹಾಡಿಕೆಯಲ್ಲಿ ಹೊಲೆಯುವ ಪ್ರಯತ್ನ ಮಾಡುತ್ತಿದ್ದಾರೆ. ಈಗಲೂ ಪಾದರಸದಂತಿರುವ ಎಪ್ಪತ್ತರ ಹರೆಯದ ಇಮಾಮ ಸಾಬ್ ವಲ್ಲೆಪ್ಪನವರಿಗೆ ಕರ್ನಾಟಕ ಸರಕಾರ ಈ ಬಾರಿಯಾದರೂ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಬೇಕಿದೆ. ಕನ್ನಡ ವಿಶ್ವವಿದ್ಯಾಲಯ ನೀಡುವ ನಾಡೋಜ ಪ್ರಶಸ್ತಿಗೂ ಅರ್ಹರಾಗಿದ್ದಾರೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ವಲ್ಲೆಪ್ಪನವರಿಗೆ ಗೌರವ ಡಾಕ್ಟರೇಟ್ ನೀಡಿ ತನ್ನ ಗೌರವವನ್ನು ಹೆಚ್ಚಿಸಿಕೊಳ್ಳಬೇಕಿದೆ. ಇಮಾಮ ಸಾಹೇಬರು ಸದಾ ಹೆಗಲಿಗೆ ಹಳದಿ ಕೆಂಪು ಮತ್ತು ಹಸಿರು ಬಣ್ಣದ ಶಲ್ಯೆಗಳನ್ನು ಹಾಕುತ್ತಾರೆ. ಈ ಮೂಲಕ ಕನ್ನಡಾಭಿಮಾನವೆಂದರೆ ಅದು ರೈತಪರ ಕಾಳಜಿ ಎನ್ನುವುದನ್ನು ಸಾಂಕೇತಿಸುವಂತೆ ಕಾಣುತ್ತಿದೆ.

# ಕ.ಕ ಭಾಗ ಹಿಂದುಳಿದ ಪ್ರದೇಶ ಹಣೆಪಟ್ಟಿ ದೂರಗೊಳಿಸೋಣ

### ಡಾ.ವೈ ರಮೇಶ್ ಬಾಬು ಹೇಳಿಕೆ | ಕಲ್ಯಾಣ ಕರ್ನಾಟಕ ಉತ್ಸವದ ಧ್ವಜಾರೋಹಣ



**ಹಂಪಿ ಟೈಮ್ಸ್ ಬಳ್ಳಾರಿ**

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ 371(ಜೆ)ನಡಿ ವಿಶೇಷ ಸ್ಥಾನಮಾನ ನೀಡಿದ್ದು, ಅವಕಾಶ ಸದುಪಯೋಗ ಪಡೆದುಕೊಂಡು ಕ.ಕ ಭಾಗ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿ ದೂರಗೊಳಿಸೋಣ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್ ಬಾಬು ಹೇಳಿದರು.

ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಗರದ ಅನಂತಪುರ ರಸ್ತೆಯ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಉತ್ಸವದ ಧ್ವಜಾರೋಹಣ ನೇರವೇರಿಸಿ ಮಾತನಾಡಿದರು.

ಭಾರತ ದೇಶಕ್ಕೆ 1947, ಆಗಸ್ಟ್.15 ರಂದು ಸ್ವಾತಂತ್ರ್ಯ ದೊರೆತಾಗ ಈಗಿನ ಕಲ್ಯಾಣ ಕರ್ನಾಟಕ ಭಾಗವು ಹೈದರಾಬಾದ್ ನಿಜಾಮರ ಅಳ್ವಿಕೆಯಲ್ಲಿತ್ತು. ಉಕ್ಕಿನ ಮನುಷ್ಯ ಸರ್ಧಾರ ವಲ್ಲಭಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಹೋರಾಟ ನಡೆಸಿ 1948 ಸೆಪ್ಟೆಂಬರ್.17 ರಂದು ವಿಮೋಚನೆ ಹೊಂದಲಾಯಿತು.

ಹಿಂದುಳಿದ ಜಿಲ್ಲೆ ಪ್ರದೇಶವೆಂಬ ಪಟ್ಟಿಯಿಂದ ಹೊರಬರಲು ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳನ್ನು ಯಾವುದೇ ಖಾಸಗಿ ಆಸ್ಪತ್ರೆಗೆ ಕಡಿಮೆ ಇಲ್ಲದಂತೆ ಸೌಕರ್ಯ ಒದಗಿಸಲಾಗುತ್ತಿದ್ದು, ಸರಳ ಹೆರಿಗೆ ವ್ಯವಸ್ಥೆಗಾಗಿ ಮನೆಯಿಂದ ಆಸ್ಪತ್ರೆಗೆ ಬರಲು 108 ವಾಹನ, ಆಸ್ಪತ್ರೆಯಲ್ಲಿ ಸುಸಜ್ಜಿತ ಹೆರಿಗೆ ಕೋಣೆ, ವಾರ್ಡ್, ಪ್ರಯೋಗಾಲಯ ಸೇವೆ, ಉಚಿತ ಊಟ, ಔಷಧಿ, ರಕ್ತ ಮನೆ ಬಿಡಲು ನಗುಮಗು ವಾಹನ ಒದಗಿಸುವಿಕೆ, ಜನನಿ ಸುರಕ್ಷಾ ಯೋಜನೆ ಅಡಿ 600 ರೂ. ಹಾಗೂ 700 ರೂ. ಸಹಾಯಧನ ಅವರ ಖಾತೆಗೆ ಸೌಲಭ್ಯದೊಂದಿಗೆ ತಾಯಿ ಮತ್ತು ಮಕ್ಕಳ ಆರೋಗ್ಯವನ್ನು ನಾವೆಲ್ಲರೂ ಕಾಪಾಡಲು ಕೈಜೊಡಿಸೋಣ, ಮತ್ತು ಸೌಲಭ್ಯಗಳನ್ನು ಜನತೆ ಕೇಳಿದಾಗ ತಕ್ಷಣವೇ ಒದಗಿಸುವ ದಿಶೆಯಲ್ಲಿ ಸನ್ನದ್ಧರಾಗಿಸಿ ಜಿಲ್ಲೆಯನ್ನು ಆರೋಗ್ಯ ಸೂಚಂಕದಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಅಭಿವೃದ್ಧಿ ಪಥದ ಕಡೆ ಮುನ್ನಡೆಸೋಣ ಎಂದು ತಿಳಿಸಿದರು. ಸಾರ್ವಜನಿಕರು ಆಸ್ಪತ್ರೆಗೆ ಬಂದಾಗ ಸೌಜನ್ಯ ಪೂರ್ವಕವಾಗಿ ಮಾತನಾಡಿಸಿ ರೋಗಕ್ಕೆ ಸೂಕ್ತ ಚಿಕಿತ್ಸೆಯನ್ನು ನೀಡಿ ಸರ್ವರ ಆರೋಗ್ಯ ಸುಧಾರಣೆಗೆ ಎಲ್ಲರೂ ಪಣತೊಡಬೇಕು.

ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಸಹಾಯಕ ಆಡಳಿತ ಅಧಿಕಾರಿ ಮೆಹಬೂಬ್ ಖಾನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ. ಹೆಚ್ ದಾಸಪ್ಪನವರ, ಕಾಯಕಲ್ಪ ಕಾರ್ಯಕ್ರಮ ಸಂಯೋಜಕ ಡಾ.ಸುರೇಶ ಕುಮಾರ, ಕಛೇರಿ ಅಧಿಕ್ಷಕ ಬಸವರಾಜ್, ರವಿಚಂದ್ರ, ಡಿಎನ್‌ಓ ಗಿರೀಶ್ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ಶ್ರೀ ವಿಶ್ವಕರ್ಮ ಜಯಂತಿ ಅಧಿಕಾರಿಗಳಿಂದ ಪುಷ್ಪ ನಮನ



**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ವಿಶ್ವಕರ್ಮ ಜಯಂತಿ ಅಂಗವಾಗಿ ವಿಜಯನಗರ ಜಿಲ್ಲಾಡಳಿತದ ವತಿಯಿಂದ ಪುಷ್ಪ ನಮನ ಸಲ್ಲಿಸಲಾಯಿತು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ವಿಶ್ವಕರ್ಮ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸೆಪ್ಟೆಂಬರ್ 17ರಂದು ಸರಳವಾಗಿ ಆಚರಿಸಲಾಯಿತು. ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ವಿಶ್ವಕರ್ಮ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ್ ಮಹಮ್ಮದ್ ಅಲಿ ಅಕ್ರಂ ಷಾ, ಅಪರ ಜಿಲ್ಲಾಧಿಕಾರಿಗಳಾದ ಇ.ಬಾಲಕೃಷ್ಣಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಿದ್ದಲಿಂಗಣ್ಣನವರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**18–09–2024 – ಬುಧವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಭಾದ್ರಪದ |
| ಯೋಗ | : ಗಂಡ |
| ಕರಣ | : ಭವ |
| ಸೂರ್ಯೋದಯ | : 06:15:33 |
| ಸೂರ್ಯಾಸ್ತ | : 18:25:56 |
| ರಾಹು ಕಾಲ | : 12:21–13:52 |
| ಯಮಘಂಡ ಕಾಲ | : 07:47–09:18 |
| ಗುಳಿಕ ಕಾಲ | : 10:49–12:21 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 17–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 11236 ಕ್ಯುಸೆಕ್ |
| ಹೊರ ಹರಿವು | 10696 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1621.24 ಅಡಿ |
| ಒಳ ಹರಿವು | 1739 ಕ್ಯುಸೆಕ್ |
| ಹೊರ ಹರಿವು | 9935 ಕ್ಯುಸೆಕ್ |
| ಸಾಮರ್ಥ್ಯ | 64.875 ಟಿಎಂಸಿ |

# ಬಯಲು ಶೌಚಲಯ, ಆನೈರ್ಮಲ್ಯ ಆರೋಗ್ಯದ ಮೇಲೆ ದುಷ್ಪರಿಣಾಮ

### ಸಿಇಓ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ ಹೇಳಿಕೆ | ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಶೌಚಾಲಯ ಬಳಕೆಗೆ ಕುರಿತು ಐಇಸಿ ಚಟುವಟಿಕೆಗಳ ಮೂಲಕ ಗ್ರಾಮೀಣ ಭಾಗದ ಜನರಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ ಹೇಳಿದರು.

"ಸ್ವಚ್ಛತಾ ಹೀ ಸೇವಾ ಪಾಕ್ಷೀಕ–2024" ರ ಕುರಿತು ವಿಜಯನಗರ ಜಿಲ್ಲಾ ಪಂಚಾಯತ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಸ್ವಚ್ಛ ಭಾರತ್( ಗ್ರಾ) ಸಹಯೋಗದಲ್ಲಿ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಸೆಪ್ಟೆಂಬರ್ 16ರಂದು ಅಯೋಜಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.




ಸ್ವಚ್ಛತಾ ಹೀ ಸೇವಾ ಪಾಕ್ಷೀಕ ಅಭಿಯಾನ ನಿಮಿತ್ತ ಅಕ್ಟೋಬರ್–02 ರವರೆಗೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸ್ವಚ್ಚತಾ ಹೀ ಸೇವಾ ಕಾರ್ಯಕ್ರಮಗಳನ್ನು ಹಾಗೂ ವಿವಿಧ ಪ್ರಮುಖ ಚಟುವಟಿಕೆಗಳನ್ನು ಆಯೋಜಿಸಿ, ಈ ಕಾರ್ಯಕ್ರಮಗಳಲ್ಲಿ ಜನ ಪ್ರತಿನಿಧಿಗಳು, ನರೇಗಾ, ಎನ್.ಆರ್.ಎಲ್.ಎಂ– ಸ್ವ–ಸಹಾಯ ಸಂಘದ ಸದಸ್ಯರು ಹಾಗೂ ಆರೋಗ್ಯ ಮತ್ತು ಆಶಾ ಕಾರ್ಯಕರ್ತರು ಹಾಗೂ ಅಂಗನವಾಡಿ ಕಾರ್ಯಕರ್ತರ ಸಹಕಾರದೊಂದಿಗೆ 14 ದಿನಗಳ ಕಾಲ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಿ. ಸಾರ್ವಜನಿಕ ಕಟ್ಟಡ ಆಸ್ಪತ್ರೆ ಮುಂಭಾಗ ಮತ್ತು ಹಿಂಭಾಗ, ತೆರೆದ ಕಲ್ಯಾಣಿ, ಮತ್ತು ವೈಯಕ್ತಿಕ ಶೌಚಲಯಗಳಲ್ಲಿ ಸರ್ಕಾರ ನಿಗದಿ ಪಡಿಸಿದ ದಿನದಂದು 3ನೇ ಶನಿವಾರದಂದು ಸ್ವಚ್ಛತಾ ಶನಿವಾರವೆಂದು ಸ್ವಚ್ಛತೆ ಮಾಡಬೇಕು. ಸ್ವಚ್ಛತಾ ಹೀ ಸೇವಾ ಪಾಕ್ಷೀಕ–2024ರ ಅಂಗವಾಗಿ ಶಾಲಾ ಮಕ್ಕಳಿಂದ ದಿನ ಪ್ರತಿ ಸ್ವಚ್ಛತಾ ಕಾರ್ಯಕ್ರಮಗಳ ಕುರಿತು ಪ್ರಭಾತ್ ಪೇರಿ ಮಾಡಿಸಿ. ಕ್ವಿಜ್ (ಸ್ವಚ್ಛತಾ ಪ್ರಭಂಧ) ಪರೀಕ್ಷೆ ನೆಡೆಸಿ. ಈ ಅಭಿಯಾನದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಮತ್ತು ಎಲ್ಲಾ ಗ್ರಾಮ ಪಂಚಾಯತಗಳಲ್ಲಿ ಎಲ್ಲಾ ಇಲಾಖೆಗಳ ಸಿಬ್ಬಂದಿಗಳ ಭಾಗವಹಿಸುವ ಮೂಲಕ ಅಭಿಯಾನವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲು, ಜಿಲ್ಲೆಯ ಎಲ್ಲಾ ವಿವಿಧ ಇಲಾಖೆಯ ಅಧಿಕಾರಿಗಳ ಮುಖ್ಯಸ್ಥರಿಗೆ ಹಾಗೂ ತಾಲೂಕು ಪಂಚಾಯತ್ ಕಾರ್ಯ ನಿರ್ವಹಕ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು.

ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಬ್ಬರು ಶೌಚಾಲಯ ಬಳಸುವಂತೆ ಐಇಸಿ ಚಟುವಟಿಕೆಗಳನ್ನು ಆಯೋಜಿಸಿ, ಸಾರ್ವಜನಿಕರಿಗೆ ಬಯಲು ಶೌಚಾಲಯದಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮ ಬೀರುವ ಕುರಿತು ಅರಿವು ಮೂಡಿಸಿ. ಇದಲ್ಲದೆ ಪರಿಸರ ಆನೈರ್ಮಲ್ಯದಿಂದ ಉಂಟಾಗುವ ರೋಗಾಣುಗಳ ಕುರಿತು, ಮನೆಯ ಕಸವನ್ನು ಅಲ್ಲಿಯೇ ಹಸಿ ಕಸ ಮತ್ತು ಒಣ ಕಸ ಎಂದು ಬೇರ್ಪಡಿಸಿ, ಪ್ರತಿ ದಿನ ಗ್ರಾಮ ಪಂಚಾಯತಿಯಿಂದ ಬರುವ ಸ್ವಚ್ಛತಾ ವಾಹಿನಿಗೆ ನೀಡಲು ಜಾಗೃತಿ ಮಾಡಿಸಬೇಕು. ಈ ಅಭಿಯಾನದಲ್ಲಿ ಗ್ರಾಮ ಪಂಚಾಯತಗಳಲ್ಲಿ ವೈಯಕ್ತಿಕ ಶೌಚಾಲಯ ಇಲ್ಲದ ಕುಟುಂಬಗಳಿಗೆ ಗ್ರಾಮ ಪಂಚಾಯತಿ ಮೂಲಕ ಅರ್ಜಿ ಸಲ್ಲಿಸುವಂತೆ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರು ಮಾತನಾಡಿ, ಪ್ರತಿ ದಿನ ಗ್ರಾಮ ಪಂಚಾಯತಗಳಲ್ಲಿ ಸ್ವಚ್ಛತೆಗೊಳಿಸುವ ಮುಂಚೆ ಹಾಗೂ ಸ್ವಚ್ಛತೆಗೊಳಿಸಿದ ನಂತರ ಸ್ವಚ್ಛತಾ ಕಾರ್ಯಕ್ರಮದ ಪೋಟೋವನ್ನು ಸ್ವಚ್ಛತಾ ಹೀ ಸೇವಾ ವೆಬ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ ಶಂಕರ ನಾಯಕ್ ಅವರು ಮಾತನಾಡಿ, ಈಗಾಗಲೇ ನಮ್ಮ ಇಲಾಖೆಯಲ್ಲಿ ಪ್ರತಿ ದಿನ ಸ್ವಚ್ಛತೆಯ ಕಾರ್ಯ ಆರಂಭಿಸಲಾಗಿದೆ ಎಂದು ತಿಳಿಸಿದರು.

ಈ ಸಂಧರ್ಭದಲ್ಲಿ ಜಿಪಂ ಎಸ್.ಬಿ.ಎಂ (ಗ್ರಾ) ನೋಡಲ್ ಅಧಿಕಾರಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು, ಎಲ್ಲಾ ತಾಲ್ಲೂಕಿನ ಕಾರ್ಯ ನಿರ್ವಾಹಕ ಅಧಿಕಾರಿಗಳು, ಕುಡಿಯುವ ನೀರು ಮತ್ತು ನೈಮರ್ಲ್ಯ ಇಲಾಖೆ ಹಾಗೂ ಸ್ವಚ್ಛ ಭಾರತ್ ಹಾಗೂ ಎನ್.ಆರ್.ಎಲ್.ಎಂ ವಿಭಾಗದ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.




## ವಿಜಯನಗರ ಸೌಹಾದ ಪತ್ತಿನ ಸಹಕಾರಿ ಸಂಘ (ನಿ)

**ತಾಲೂಕು ಕುರುಬರ ಸಮಾಜ, 10ನೇ ವಾರ್ಡ್, ಹಂಪಿ ರಸ್ತೆ, ಹೊಸಪೇಟೆ –583201, ವಿಜಯನಗರ ಜಿಲ್ಲೆ**
**ದೂರವಾಣಿ: 08394–228872**

**13ನೇ ವಾರ್ಷಿಕ ಮಹಾಜನ ಸಭೆ ಅಹ್ವಾನ ಪತ್ರಿಕೆ**

ಮಾನ್ಯ ಸದಸ್ಯರೇ
ಸನ್ 2023–24ನೇ ಸಾಲಿನ 13ನೇ ವಾರ್ಷಿಕ ಮಹಾಜನ ಸಭೆಯನ್ನು, **ದಿನಾಂಕ 20–09–2024 ರಂದು ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ** ಸಹಕಾರಿಯ ಕಚೇರಿಯಲ್ಲಿ ಅಧ್ಯಕ್ಷರಾದ **ಶ್ರೀ ಆರ್.ವೆಂಕಟೇಶ್** ರವರ ಅಧ್ಯಕ್ಷತೆಯಲ್ಲಿ ಮಹಾಜನಸಭೆ ಕರೆಯಲಾಗಿದೆ. ಕಾರಣ ಸಹಕಾರಿಯ ಎಲ್ಲಾ ಸದಸ್ಯರು ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಲು ವಿನಂತಿ.

ದಿನಾಂಕ : 22–08–2024 ಸಹಿ/– (ಡಿ.ಚಂದ್ರಶೇಖರ್)
ಸ್ಥಳ : ಹೊಸಪೇಟೆ ಕಾರ್ಯದರ್ಶಿ

**ಸೂಚನೆ :** – 1) ವಾರ್ಷಿಕ ಮಹಾಜನ ಸಭೆಯ ನೋಟಿಸ್ಸನ್ನು ಎಲ್ಲಾ ಸದಸ್ಯರಿಗೆ ಅಂಚೆ/ವಾಟ್ಸ್‌ಪ್ ಮುಖಾಂತರ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಇದನ್ನೆ ಆಮಂತ್ರಣ ಎಂದು ಭಾವಿಸಿ ಸಭೆಗೆ ಹಾಜರಾಗಲು ಕೋರಲಾಗಿದೆ.


# ಮಾಂಗಲ್ಯ ಸೂತ್ರ ಸಕಲ ಮಂಗಲ ಕಾರ್ಯಗಳಿಗೂ ಮಹತ್ವ ಪಡೆದಿದೆ

### ತಹಶಿಲ್ದಾರ್ ಅಮರೇಶ್ ಜಿ.ಕೆ ಹೇಳಿಕೆ | ಶ್ರೀ ವಿಶ್ವಕರ್ಮ ಜಯಂತಿ ದಿನಾಚರಣೆ

**ಹಂಪಿ ಟೈಮ್ಸ್ ಕೊಟ್ಟೂರು**

ಯಾರಿಗೆ, ಹುಟ್ಟು ಮತ್ತು ಸಾವು ಇರುತ್ತವೋ ಅವರ ಜಯಂತಿ ಆಚರಿಸುತ್ತೇವೆ. ದೈವಾಂಶ ಸಂಭೂತರಾದ ವಿಶ್ವಕರ್ಮರ ಜಯಂತಿ ಎನ್ನದೇ ವಿಶ್ವಕರ್ಮೋತ್ಸವ ಎನ್ನುವುದು ಸೂಕ್ತ.ಮಾಂಗಲ್ಯ ಸೂತ್ರದಿಂದ ಹಿಡಿದು,ಸಕಲ ಮಂಗಲ ಕಾರ್ಯಗಳಿಗೂ ಅವರ ಕಾರ್ಯ ಮಹತ್ವ ಪಡೆದಿದೆ ಎಂದು ತಹಶಿಲ್ದಾರ ಅಮರೇಶ್ ಜಿ. ಕೆ ಹೇಳಿದರು.



ಇಲ್ಲಿನ ತಾಲೂಕು ಕಛೇರಿ ಮುಂಭಾಗ ತಹಶಿಲ್ದಾರ ಅವರು ಕಲ್ಯಾಣ ಕರ್ನಾಟಕ ಉತ್ಸವ ನಿಮಿತ್ತ ಧ್ವಜಾರೋಹಣ ನೆರವೇರಿಸಿ ನಂತರ ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತಿ ಹಾಗೂ ಸರ್ಧಾರ್ ವಲ್ಲಭಾಯಿ ಪಟೇಲ್ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಮಾಜದ ಸ್ವಾಸ್ತ್ಯವನ್ನು ಕಾಪಾಡಲು ಸರ್ಕಾರದಿಂದ ಜಯಂತಿಗಳ ಆಚರಣೆ ಪ್ರಾರಂಭಿಸಲಾಗಿದ್ದು, ನಾವು ಬರೀ ಭೌತಿಕವಾಗಿ ಆಚರಿಸದೇ ಮಹಾತ್ಮರು ಮನುಕುಲಕ್ಕೆ ನೀಡಿದ ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಮುಂದಿನ ಪೀಳಿಗೆಗೆ ತಿಳಿಸಿಕೊಡುವಂತದ್ದಾಗಬೇಕು.

ವಿಶ್ವಕರ್ಮರನ್ನು ಬರೀ ಒಂದು ಜಾತಿಗೆ ಸೀಮಿತಗೊಳಿಸದೇ ಇಂಜಿನಿಯರ್, ವೈಧ್ಯರು, ಡಾಕ್ಟರ್ ಹೀಗೆ ಎಲ್ಲಾ ಕುಶಲಕರ್ಮಿ ಗಳನ್ನು, ತಂತ್ರಜ್ಞರನ್ನು ಸೇರಿಸಿ ಸಾಂಸ್ಕೃತಿಕ ಶ್ರೀಮಂತಿಕೆಗೊಳಿಸಬೇಕು ಎಂದರು.

ಹೈದ್ರಾಬಾದ್ ಕರ್ನಾಟಕಕ್ಕೆ 1 ವರ್ಷ ತಡವಾಗಿ ಸ್ವಾತಂತ್ರ್ಯ ಸಿಕ್ಕಿರುವ ಕಾರಣ ನಾವು "ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ" ಎಂದೂ, ಇತ್ತೀಚಿನ ದಿನಗಳಲ್ಲಿ "ಕಲ್ಯಾಣ ಕರ್ನಾಟಕ ಉತ್ಸವ" ಎಂದು ಆಚರಿಸುತ್ತಿದ್ದೇವೆ. ನಿಜಾಮರ ಆಳ್ವಿಕೆಯಿಂದ ವಿಮೋಚನೆಗೆ ಹೋರಾಡಿ ಮಡಿದ ವೀರರನ್ನ ಹೋರಾಟಗಾರರನ್ನ ಇಂದು ಮೊದಲು ಸ್ಮರಿಸಬೇಕಿದೆ ಎಂದರು. ಡಾ.ಸುಭಾಸ್ ಚಂದ್ರಭೋಸ್, ಆಂಗ್ಲ ಭಾಷೆಯ ಉಪನ್ಯಾಸಕ ವಿಶೇಷ ಉಪನ್ಯಾಸ ನೀಡಿದರು.

ಡಾ.ಬಿ ಆನಂದಕುಮಾರ್ ತಾ.ಪಂ ಇಒ, ವಿಜಯಕುಮಾರ್ ಹೆಚ್. ಎಡಿ ನರೇಗಾ ಯೋಜನೆ, ನಿಂಗಪ್ಪ ಇಸಿಒ, ಅಜ್ಜಪ್ಪ ಸಿ. ವಿಶ್ವಕರ್ಮ ಸಮಾಜದ ಸಂತೋಷ, ಕಾಳಾಚಾರಿ, ಶಿಕ್ಷಣ ಇಲಾಖೆಯ ಬಿಆರ್ಪಿ & ಸಿಆರ್ಪಿ ಗಳು ಅಜ್ಜಯ್ಯ, ಅಣಜಿ ಸಿದ್ದಲಿಂಗಪ್ಪ, ಸಂದೀಪ, ರವಿಕುಮಾರ, ಕೊಟ್ರೇಶಿ, ದುರುಗಪ್ಪ, ಮಹಾಂತೇಶ, ಷಣ್ಮುಖಪ್ಪ, ವಿಶಾಲ, ಗಿರಿಜ, ಹಾಲಸ್ವಾಮಿ ಕಂದಾಯ ನಿರೀಕ್ಷಕರು, ಹರೀಶ ಗ್ರಾಆಅ, ಕಛೇರಿಯ ಸಿಬ್ಬಂದಿ ಹಾಜರಿದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ, ನಿರೂಪಿಸಿದರು.



ಹೊಸಪೇಟೆಯಲ್ಲಿ ವಿಶ್ವಕರ್ಮ ಜಯಂತಿಯಲ್ಲಿ ಪಾಲ್ಗೊಂಡ ಸಮುದಾಯದ ಮಹಿಳೆಯರು

# ಪ್ರಾಯೋಜಕತ್ವ ಕಾರ್ಯಕ್ರಮ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸ್ಪಷ್ಟನೆ

**ಎರಡನೇ ಪುಟದಿಂದ**

ಹೆಚ್.ಐ.ವಿ/ಏಡ್ಸ್ ಬಾಧಿತ (ಪೀಡಿತ) ಮಕ್ಕಳು, ದೈಹಿಕ ಅಂಗವಿಕಲತೆಯುಳ್ಳ ಮಕ್ಕಳು, ಕಾಣೆಯಾದ ಅಥವಾ ಓಡಿಹೋದ ಮಕ್ಕಳು, ಬಾಲ ಬಿಕ್ಷುಕರು ಅಥವಾ ಬೀದಿ ಬದಿ ಮಕ್ಕಳು, ಚಿತ್ರಹಿಂಸೆ ಅಥವಾ ನಿಂದನೆ ಅಥವಾ ಬೆಂಬಲ ಪುನರ್ವಸತಿ ಅಗತ್ಯವಿರುವ ಶೋಷಿತ ಮಕ್ಕಳು ಪ್ರಾಯೋಜಕತ್ವ ಯೋಜನೆಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಮುಂದಿನ ವರ್ಷ 2025–26ನೇ ಸಾಲಿನಿಂದ ಅರ್ಹ ಮಕ್ಕಳಿಗೆ ಮಾತ್ರ ಮನವಿ ಪಡೆಯುತ್ತಿದ್ದು, ವಿಜಯನಗರ ಜಿಲ್ಲೆಯ ಹೊಸಪೇಟೆಯ ಬಸವೇಶ್ವರ ಬಡಾವಣೆ ಯಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿಯಲ್ಲಿ ಅರ್ಜಿ ಪಡೆದು ಅಗತ್ಯ ದಾಖಲಾತಿಯೊಂದಿಗೆ ಕಚೇರಿಗೆ ಸಲ್ಲಿಸಬಹುದು. ವಾಟ್ಸ್ಆ್ಯಪ್ ಗ್ರೂಪ್‌ನಲ್ಲಿ ತಂದೆ ಇಲ್ಲದ ಮಕ್ಕಳ ಖಾತೆಗೆ ವರ್ಷಕ್ಕೆ 24,000 ರೂ.ಗಳ ಸ್ಕಾಲರ್‌ಶಿಪ್ ಸೌಲಭ್ಯ ನೀಡುತ್ತಾರೆ ಎಂಬ ಸಂದೇಶವನ್ನು ನೋಡಿದ ಸಾರ್ವಜನಿಕರು ಜಿಲ್ಲಾಧಿಕಾರಿಗಳಕಚೇರಿಗೆಅಲೆದಾಡುತ್ತಿದ್ದಾರೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಗೆ ಪ್ರತಿ ದಿನ ನೂರಾರು ಜನ ದೂರವಾಣಿ ಕರೆಗಳನ್ನು ಮಾಡಿ ವಿಚಾರಿಸುತ್ತಿದ್ದಾರೆ. ಇದಲ್ಲದೇ ಮಧ್ಯವರ್ತಿಗಳು ಜನರಿಂದ ಹಣ ವಸೂಲಾತಿ ಮಾಡುತ್ತಿದ್ದಾರೆ. ಕಾರಣ ಸಾರ್ವಜನಿಕರು ಮಧ್ಯವರ್ತಿಗಳ ಆಮಿಷಕ್ಕೊಳಗಾಗಬಾರದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ತಿಳಿಸಿದೆ

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

ಮುಂದುವರೆದ ಭಾಗ

3) (1,6) ಮತ್ತು (4,3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 1 : 2 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ. (ಏಪ್ರಿಲ್ 2020)

4) (4,-3) ಮತ್ತು (8,5) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 3 : 1 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ. (ಜೂನ್ 2024)

4) (-6,10) ಮತ್ತು (3, -8) ಬಿಂದುಗಳನ್ನು ಸೇರಿಸುವ ರೇಖಾಖಂಡವು (-4,6) ಬಿಂದುವಿನಿಂದ ಯಾವ ಅನುಪಾತದಲ್ಲಿ ವಿಭಾಗಿಸಲ್ಪಡುತ್ತದೆ ಎಂದು ಕಂಡುಹಿಡಿಯಿರಿ.

### ಮಧ್ಯಬಿಂದು ಸೂತ್ರ

$$P(x, y) = \left(\frac{x_1+x_2}{2}, \frac{y_1+y_2}{2}\right)$$

1) (7,4) ಮತ್ತು (5,6) ) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

$x_1=7,\quad x_2=5,\quad y_1=4,\quad y_2=6,$

$$P(x, y) = \left(\frac{x_1+x_2}{2}, \frac{y_1+y_2}{2}\right)$$

$$p(x ,y) = \left(\frac{7+5}{2}, \frac{4+6}{2}\right)$$

$$p(x ,y) = \left(\frac{12}{2}, \frac{10}{2}\right)$$

$$p(x ,y) = (6, 5)$$

**ಬಿಡಿಸಿ ಪ್ರಯತ್ನಿಸಿ :**

2) (6,2) ಮತ್ತು (4,-4) ) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

3) (3, 1) ಮತ್ತು (5, 7) ) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

4) A ( 3, 4 ) ಮತ್ತು B ( 5, 6 ) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕಗಳನ್ನು ಮಧ್ಯಬಿಂದು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ.

5) P ( 2, 3) ಮತ್ತು Q (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕಗಳನ್ನು ಮಧ್ಯಬಿಂದು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ (ಸೆಪ್ಟಂಬರ್ 2020)

### ಬಿಡಿಸಿ ಪ್ರಯತ್ನಿಸಿ

1) ಮೂಲಬಿಂದುವಿನಿಂದ (9,5) ಬಿಂದುವಿಗೆ ಇರುವ ದೂರವನ್ನು ಕಂಡುಹಿಡಿಯಿರಿ.

2) (8,5) ಮತ್ತು (1,–3) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ

3) (9,7) ಮತ್ತು (4,2) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

4) (5,4) ಮತ್ತು (2,1) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 3 : 2 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ

5) M ( 6, 3) ಮತ್ತು N (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕಗಳನ್ನು ಮಧ್ಯಬಿಂದು ಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ.

6) (7,5) ಮತ್ತು (3,–5) ) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

7) (3, 1) ಮತ್ತು (5, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ,** ಶಿಕ್ಷಕರು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಸಾಯಿಮಣಿ ಪ್ರಕಾಶನ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055